# ಸೇವಾವಾಣಿ

## ಮಾಸಿಕ ಸುದ್ದಿಪತ್ರಿಕೆ | ಜುಲೈ 2026






**“ಮಾನವೀಯ ಮೌಲ್ಯಗಳು,
ಸಮಾನ ಅವಕಾಶಗಳು ಮತ್ತು
ಸುಸ್ಥಿರ ಅಭಿವೃದ್ಧಿಯೊಂದಿಗೆ ಉತ್ತಮ
ಸಮಾಜ ನಿರ್ಮಾಣದತ್ತ ನಮ್ಮ
ಪಯಣ ನಿರಂತರ.”**

ಮಾಸಿಕ ಸುದ್ದಿಪತ್ರಿಕೆ | ಜುಲೈ 2026

# ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು
# ಸೇವಾ ಸಂಗಮ ಸಂಸ್ಥೆ, ಕಲಬುರಗಿ

# ಸೇವಾವಾಣಿ

## ಮಾಸಿಕ ಸುದ್ದಿಪತ್ರಿಕೆ - ಜುಲೈ 2026

**ಪ್ರಕಟಣೆ: ಆಗಸ್ಟ್ ತಿಂಗಳು**











www.orbitbidar.in

# About ORBIT



## Vision

"A transformed society based on Equality, Justice and Love."

## Mission

To facilitate the empowerment of most marginalized through participatory development, capacity building and collaborative social actions leading to self reliance and social dignity.

## Goals

- Enhanced dignity, quality of life and participation in local self governance for socially and economically backward women through integrated development.
- Children enjoying a safe and secure environment exercising their Rights and accessing Inclusive development.
- Upholding dignity of life and Mainstreaming Persons with disability and HIV by increasing access to opportunities and entitlements along with promotion of education and leadership.
- Protection and sustainable management of Natural Resources by caring for Mother Earth.
- Self sustained organization for Sustainable Development.

# ಧರ್ಮಾಧ್ಯಕ್ಷರ ಸಂದೇಶ



**ಪ್ರಿಯ ಓದುಗರೇ, ದಾನಿಗಳು, ಸಹಯೋಗಿಗಳು ಹಾಗೂ ಆತ್ಮೀಯ ಸಹೋದರ-ಸಹೋದರಿಯರೇ,**

'ಸೇವೆಯ ಹೆಜ್ಜೆ – ಸಮಾಜದ ಪ್ರಗತಿಯ ದಾರಿ' ಎಂಬ ಧ್ಯೇಯದೊಂದಿಗೆ ನಿಮ್ಮ ಕೈಯಲ್ಲಿರುವ "ಸೇವಾ ವಾಣಿ" ಮಾಸಿಕ ಸುದ್ದಿಪತ್ರಿಕೆಗೆ ಹೃತ್ಪೂರ್ವಕ ಸ್ವಾಗತ.

ಈ ಸಂಚಿಕೆಯು ಕೇವಲ ಸುದ್ದಿಗಳ ಸಂಕಲನವಲ್ಲ; ಇದು ಅನೇಕ ಕುಟುಂಬಗಳ ಬದುಕಿನಲ್ಲಿ ಮೂಡಿದ ಹೊಸ ಭರವಸೆ, ಮಕ್ಕಳ ಕನಸುಗಳಿಗೆ ಸಿಕ್ಕ ಹೊಸ ರೆಕ್ಕೆಗಳು, ಮಹಿಳೆಯರ ಸಬಲೀಕರಣದ ಹೆಜ್ಜೆಗಳು ಹಾಗೂ ಸಮುದಾಯದ ಸಮಗ್ರ ಅಭಿವೃದ್ಧಿಯ ಪಯಣವನ್ನು ದಾಖಲಿಸುವ ಜೀವಂತ ಸಾಕ್ಷಿಯಾಗಿದೆ.

ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಗಮ ಸಂಸ್ಥೆಗಳು ಶಿಕ್ಷಣ, ಆರೋಗ್ಯ, ಮಹಿಳಾ ಸಬಲೀಕರಣ, ಮಕ್ಕಳ ಅಭಿವೃದ್ಧಿ, ಯುವಜನರ ಪ್ರಗತಿ ಹಾಗೂ ಸಮುದಾಯ ಅಭಿವೃದ್ಧಿ ಕ್ಷೇತ್ರಗಳಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದು, ಈ ಮಾಸಿಕ ಸುದ್ದಿಪತ್ರಿಕೆಯ ಮೂಲಕ ಕಳೆದ ತಿಂಗಳಲ್ಲಿ ಕೈಗೊಂಡ ಪ್ರಮುಖ ಕಾರ್ಯಕ್ರಮಗಳು, ಸಾಧನೆಗಳು ಮತ್ತು ಸಮಾಜದಲ್ಲಿ ಉಂಟಾದ ಸಕಾರಾತ್ಮಕ ಬದಲಾವಣೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇವೆ.

ನಮ್ಮ ಸೇವಾ ಪಯಣದಲ್ಲಿ ತಮ್ಮ ಅಮೂಲ್ಯ ಸಹಕಾರ ನೀಡುತ್ತಿರುವ ಸಿಬ್ಬಂದಿ, ಸ್ವಯಂಸೇವಕರು, ದಾನಿಗಳು, ಸಹಭಾಗಿತ್ವ ಸಂಸ್ಥೆಗಳು ಹಾಗೂ ಸಮುದಾಯದ ಪ್ರತಿಯೊಬ್ಬ ಸದಸ್ಯರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಈ ಸುದ್ದಿಪತ್ರಿಕೆಯನ್ನು ಓದುತ್ತಿರುವ ನೀವು ಸಹ ಸಮಾಜ ಪರಿವರ್ತನೆಯ ಈ ಪಯಣದಲ್ಲಿ ಭಾಗಿಯಾಗುತ್ತೀರಿ ಎಂಬ ವಿಶ್ವಾಸ ನನಗಿದೆ. ನಿಮ್ಮ ಬೆಂಬಲ, ಪ್ರೋತ್ಸಾಹ ಮತ್ತು ಪ್ರಾರ್ಥನೆಗಳು ನಮ್ಮ ಸೇವೆಯನ್ನು ಇನ್ನಷ್ಟು ಜನರ ಬದುಕಿಗೆ ತಲುಪಿಸಲು ಶಕ್ತಿಯಾಗಲಿ.

**ಸರ್ವಶಕ್ತ ದೇವರ ಆಶೀರ್ವಾದ ನಿಮ್ಮೆಲ್ಲರ ಮೇಲಿರಲಿ.**

ಸ್ನೇಹಪೂರ್ವಕವಾಗಿ,

ಅಧ್ಯಕ್ಷರು:

**ಪೂಜ್ಯ ರಾಬರ್ಟ್ ಮಿರಾಂದ**

**ಧರ್ಮಾಧ್ಯಕ್ಷರು, ಗುಲ್ಬರ್ಗ ಧರ್ಮಕ್ಷೇತ್ರ**

ಅಧ್ಯಕ್ಷರು, ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು ಸೇವಾ ಸಂಗಮ ಸಂಸ್ಥೆ, ಕಲಬುರಗಿ

# ನಿರ್ದೇಶಕರ ಸಂದೇಶ



**ಪ್ರಿಯ ಸ್ನೇಹಿತರೆ,**

ನೀವು ವೀಕ್ಷಿಸುತ್ತಿರುವ "ಸೇವಾವಾಣಿ" ಮಾಸಿಕ ಸುದ್ದಿಪತ್ರಿಕೆಯ ಮೂಲಕ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಗಮ ಸಂಸ್ಥೆಗಳ ಸೇವಾ ಪಯಣ, ಪ್ರಮುಖ ಕಾರ್ಯಕ್ರಮಗಳು, ಸಾಧನೆಗಳು ಹಾಗೂ ಸಮಾಜದಲ್ಲಿ ಮೂಡಿಸುತ್ತಿರುವ ಸಕಾರಾತ್ಮಕ ಬದಲಾವಣೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ನನಗೆ ಅಪಾರ ಸಂತೋಷವಾಗುತ್ತಿದೆ.

ಈ ಡಿಜಿಟಲ್ ಸುದ್ದಿಪತ್ರಿಕೆಯು ಕಳೆದ ೩ಂಗಳಲ್ಲಿ ನಮ್ಮ ಸಂಸ್ಥೆಗಳು ಕೈಗೊಂಡ ವಿವಿಧ ಕಾರ್ಯಕ್ರಮಗಳು, ಯಶೋಗಾಥೆಗಳು ಹಾಗೂ ಸಮುದಾಯದ ಅಭಿವೃದ್ಧಿಗಾಗಿ ನಡೆದ ಸೇವಾ ಚಟುವಟಿಕೆಗಳ ಸಮಗ್ರ ಚಿತ್ರಣವನ್ನು ನಿಮ್ಮ ಮುಂದಿಡುತ್ತದೆ. ಪ್ರತಿಯೊಂದು ಪುಟವೂ ಸೇವೆ, ಸಮರ್ಪಣೆ ಮತ್ತು ಸಮಾಜ ಪರಿವರ್ತನೆಯ ಕಥೆಯನ್ನು ಹೇಳುತ್ತದೆ.

ಈ ಸೇವಾ ಪಯಣದಲ್ಲಿ ನಮ್ಮೊಂದಿಗೆ ಕೈಜೋಡಿಸಿರುವ ಸಿಬ್ಬಂದಿ, ಸ್ವಯಂಸೇವಕರು, ದಾನಿಗಳು, ಸಹಭಾಗಿತ್ವ ಸಂಸ್ಥೆಗಳು ಹಾಗೂ ನಮ್ಮೆಲ್ಲಾ ಬೆಂಬಲಿಗರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ನಿಮ್ಮ ನಿರಂತರ ಸಹಕಾರ ಮತ್ತು ಪ್ರೋತ್ಸಾಹವೇ ನಮ್ಮ ಸೇವೆಯನ್ನು ಇನ್ನಷ್ಟು ಜನರಿಗೆ ತಲುಪಿಸುವ ಶಕ್ತಿಯಾಗಿದೆ.

ಸಮಾಜದಲ್ಲಿ ಆಶೆ, ಆತ್ಮವಿಶ್ವಾಸ ಮತ್ತು ಅಭಿವೃದ್ಧಿಯ ಬೆಳಕನ್ನು ಹರಡುವ ಈ ಪಯಣದಲ್ಲಿ ನೀವು ಸಹ ನಮ್ಮೊಂದಿಗೆ ಇರಬೇಕೆಂದು ಆತ್ಮೀಯವಾಗಿ ಆಹ್ವಾನಿಸುತ್ತೇನೆ.

**ದೇವರ ಆಶೀರ್ವಾದ ನಿಮ್ಮೆಲ್ಲರ ಮೇಲಿರಲಿ.**

ಫಾ. ವಿಕ್ಟರ್ ವಾಸ್
ನಿರ್ದೇಶಕರು
**ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು**
**ಸೇವಾ ಸಂಗಮ ಸಂಸ್ಥೆ, ಕಲಬುರಗಿ**

# 01 ಆರ್ಬಿಟ್ ಸಂಸ್ಥೆ, ಹುಮನಾಬಾದ

## ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮ




ದಿನಾಂಕ: 02 July 2026 ಔರಾದ್ ತಾಲೂಕಿನ ಬಲ್ಲೂರ್ (ಜೆ) ಗ್ರಾಮದಲ್ಲಿ ನವಜೀವನ (LLLF) ಕಾರ್ಯಕ್ರಮದಡಿ ಆರೈಕೆದಾರರ ಸಭೆಯನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಸಭೆಯಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಸುಖಿ ಅವರು ಆರೈಕೆದಾರರ ದೈಹಿಕ ಹಾಗೂ ಮಾನಸಿಕ ಆರೋಗ್ಯ, ಆರೋಗ್ಯಕರ ಜೀವನಶೈಲಿ ಹಾಗೂ ನಿಯಮಿತ ಆರೋಗ್ಯ ತಪಾಸಣೆಯ ಮಹತ್ವದ ಕುರಿತು ಮಾಹಿತಿ ನೀಡಿದರು. ನಂತರ ಎಸ್‌ಐಆರ್ (SIR) ಕುರಿತು ಅದರ ಉದ್ದೇಶ, ಸಮರ್ಪಕ ಅನುಷ್ಠಾನ, ದಾಖಲೆಗಳ ನಿರ್ವಹಣೆ ಹಾಗೂ ಸೇವೆಯ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಅದರ ಪಾತ್ರವನ್ನು ವಿವರಿಸಲಾಯಿತು. ಸಭೆಯಲ್ಲಿ ಆರೈಕೆದಾರರ ಪ್ರಶ್ನೆಗಳಿಗೆ ಉತ್ತರ ನೀಡಿ, ಅವರ ಸಂದೇಹಗಳನ್ನು ನಿವಾರಿಸಲಾಯಿತು. ಈ ಸಭೆಯಲ್ಲಿ 7 ಮಂದಿ ಆರೈಕೆದಾರರು ಭಾಗವಹಿಸಿದ್ದು, ಪಡೆದ ಮಾಹಿತಿಯನ್ನು ತಮ್ಮ ಕಾರ್ಯಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಾಗಿ ತಿಳಿಸಿದರು.

**ವರದಿಗಾರರು: ಶ್ರೀ ಸುಕ್ಕು**



**ವರದಿಗಾರರು: ಶ್ರೀಮತಿ ರುಪಾಲಿ**

ದಿನಾಂಕ: 02 July 2026 ಬೀದರ ಜಿಲ್ಲೆ ಚಿಟ್ಟಾ ಗ್ರಾಮ ಆರ್ಬಿಟ್ ಸಂಸ್ಥೆ ಹಾಗೂ LLLF ಅವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಸಾಮಾಜಿಕ ಶಿಕ್ಷಣ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಕೌನ್ಸಿಲರ್ ಶ್ರೀಮತಿ ರೂಪಾಲಿ ಸಾಲಗಾರೆ ಅವರು ಸಮುದಾಯದ ಸದಸ್ಯರಲ್ಲಿ ಮಾನಸಿಕ ಆರೋಗ್ಯದ ಕುರಿತು ಅರಿವು ಮೂಡಿಸಿ, ಮಾನಸಿಕ ಅಸ್ವಸ್ಥತೆಯ ಕುರಿತ ಕಳಂಕ ನಿವಾರಣೆ, ಆರಂಭಿಕ ಹಂತದಲ್ಲಿಯೇ ಸಮಸ್ಯೆಗಳನ್ನು ಗುರುತಿಸಿ ಚಿಕಿತ್ಸೆ ಪಡೆಯುವ ಅಗತ್ಯತೆ, ಸ್ವಯಂ ಆರೈಕೆ ಹಾಗೂ ಕುಟುಂಬದ ಬೆಂಬಲದ ಮಹತ್ವವನ್ನು ವಿವರಿಸಿದರು. ಇದರೊಂದಿಗೆ ಯೋಗ ತರಬೇತಿಯನ್ನೂ ನಡೆಸಿ, ಸರಳ ಯೋಗಾಸನಗಳು ಹಾಗೂ ಉಸಿರಾಟದ ವ್ಯಾಯಾಮಗಳ ಮೂಲಕ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತಮಗೊಳಿಸುವ ವಿಧಾನಗಳನ್ನು ತಿಳಿಸಲಾಯಿತು. ಭಾಗವಹಿಸಿದವರು ಚರ್ಚೆ ಹಾಗೂ ಯೋಗಾಭ್ಯಾಸದಲ್ಲಿ ಉತ್ಸಾಹದಿಂದ ಪಾಲ್ಗೊಂಡು ತಮ್ಮ ಸಂದೇಹಗಳನ್ನು ನಿವಾರಿಸಿಕೊಂಡರು. ಕಾರ್ಯಕ್ರಮದ ಕೊನೆಯಲ್ಲಿ ಪ್ರತಿದಿನ ಯೋಗಾಭ್ಯಾಸ ಮಾಡುವುದಾಗಿ ಹಾಗೂ ವೈದ್ಯರ ಸಲಹೆಯಂತೆ ಔಷಧಿಗಳನ್ನು ನಿಯಮಿತವಾಗಿ ಸೇವಿಸುವುದಾಗಿ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.

13 July 2026ರಂದು ಕಮಲನಗರ ತಾಲೂಕಿನ ಬೆಂಬ್ರಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ವತಿಯಿಂದ ಮಾನಸಿಕ ಅಸ್ವಸ್ಥತೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸಂಸ್ಥೆಯ ಕಾರ್ಯಕರ್ತೆ ಕುಮಾರಿ ಸಂಗೀತಾ ಅವರು ಮಾನಸಿಕ ಆರೋಗ್ಯದ ಮಹತ್ವ, ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು, ಆರಂಭಿಕ ಹಂತದಲ್ಲಿಯೇ ಚಿಕಿತ್ಸೆ ಪಡೆಯುವ ಅಗತ್ಯತೆ ಹಾಗೂ ಮಾನಸಿಕ ಅಸ್ವಸ್ಥರ [illegible] ಸಮಾಜದಲ್ಲಿ ಸಹಾನುಭೂತಿ ಮತ್ತು ಬೆಂಬಲದ ಮನೋಭಾವ ಬೆಳೆಸುವ ಕುರಿತು ಅರಿವು ಮೂಡಿಸಿದರು.
ತಿಂಗಳ ಪ್ರತಿ ಎರಡನೇ ಶುಕ್ರವಾರ ತಾಲ್ಲೂಕು ಆಸ್ಪತ್ರೆಯಲ್ಲಿ ಉಚಿತ ಮಾನಸಿಕ ಆರೋಗ್ಯ ತಪಾಸಣೆ ಲಭ್ಯವಿರುವ ಕುರಿತು ಮಾಹಿತಿ ನೀಡಲಾಯಿತು. ಆರ್ಬಿಟ್ ಸಂಸ್ಥೆಯು ಹಲವು ವರ್ಷಗಳಿಂದ ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ಸಮುದಾಯ ಆಧಾರಿತ ಸೇವೆಗಳನ್ನು ಒದಗಿಸುತ್ತಿದ್ದು, ಅನೇಕ ಫಲಾನುಭವಿಗಳ ಚೇತರಿಕೆಗೆ ನೆರವಾದ ಯಶೋಗಾಥೆಗಳನ್ನು ಹಂಚಿಕೊಳ್ಳಲಾಯಿತು.

**ವರದಿಗಾರರು: ಕುಮಾರಿ ಸಂಗೀತಾ**



13 July 2026ರಂದು ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಕಾರ್ಯಕ್ರಮದ ವತಿಯಿಂದ ಕೊಳ್ಳೂರ್ ಸರ್ಕಾರಿ ಪ್ರೌಢಶಾಲೆಯಲ್ಲಿ ವನಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ನವಜೀವನ ಯೋಜನೆಯ ಯೋಜನಾ ವ್ಯವಸ್ಥಾಪಕರಾದ ಫಾ. ಯಾನ್ಸಿ ಅವರು ಪರಿಸರ ಸಂರಕ್ಷಣೆ, ಮರಗಳ ಮಹತ್ವ ಹಾಗೂ ಹಸಿರು ಪರಿಸರ ನಿರ್ಮಾಣದಲ್ಲಿ ಪ್ರತಿಯೊಬ್ಬರ ಜವಾಬ್ದಾರಿಯ ಕುರಿತು ಮಾಹಿತಿ ನೀಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಸುಧಾಕರ್ ಕೊಳ್ಳೂರ, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರಾದ ಚಿನ್ನುಸಾಬ್, ಶಾಲೆಯ ಮುಖ್ಯೋಪಾಧ್ಯಾಯರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಅತಿಥಿಗಳು ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಅದರ ಪೋಷಣೆ ಮಾಡುವಂತೆ ಕರೆ ನೀಡಿದರು.
ಕಾರ್ಯಕ್ರಮದ ಅಂಗವಾಗಿ ಶಾಲಾ ಆವರಣದಲ್ಲಿ ಮೂರು ಗಿಡಗಳನ್ನು ನೆಡಲಾಯಿತು. ಸುಮಾರು 40 ವಿದ್ಯಾರ್ಥಿಗಳು ಹಾಗೂ ಶಾಲೆಯ ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ಶ್ರೀ ಯೋಹಾನ್ ಅವರು ವಂದನಾರ್ಪಣೆ ಸಲ್ಲಿಸುವ ಮೂಲಕ ಕಾರ್ಯಕ್ರಮವನ್ನು ಸಮಾಪಿಸಿದರು.

**ವರದಿಗಾರರು: ಶ್ರೀ ಯೋಹಾನ್**



**"ಜನರೊಂದಿಗೆ, ಜನರಿಗಾಗಿ, ಜನರ ಅಭಿವೃದ್ಧಿಗಾಗಿ"**

## "ಒಂದು ಗಿಡ ನೆಡಿ - ಸಾವಿರ ಜೀವಗಳಿಗೆ ಆಶ್ರಯ ನೀಡಿ."

15 July 2026ರಂದು ಭಾಲ್ಕಿ ತಾಲೂಕಿನ ದಿವ್ಯ ಜ್ಯೋತಿ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್ ಲವ್ ಲಾಫ್ (LLLF) ಕಾರ್ಯಕ್ರಮದ ವತಿಯಿಂದ ವನಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕಲ್ಪನಾ ಹಾಗೂ ಸಿ.ಬಿ.ಆರ್. ಸಿಬ್ಬಂದಿ ಶ್ರೀ ಪ್ರಕಾಶ್ ಅವರು ಭಾಗವಹಿಸಿದರು. ಶಾಲೆಯ ವ್ಯವಸ್ಥಾಪಕರಾದ ಫಾ. ಡೇವಿಡ್ ಅವರು ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಪರಿಸರವು ದೇವರ ಅಮೂಲ್ಯ ಕೊಡುಗೆಯಾಗಿದ್ದು ಅದನ್ನು ಸಂರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ತಿಳಿಸಿದರು. ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ, ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಅದರ ಪೋಷಣೆ ಮಾಡುವ ಮೂಲಕ ಹಸಿರು ಪರಿಸರ ನಿರ್ಮಾಣಕ್ಕೆ ಕೈಜೋಡಿಸುವಂತೆ ಕರೆ ನೀಡಿದರು. ಈ ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 40 ಮಂದಿ ಭಾಗವಹಿಸಿದರು.


ವರದಿಗಾರರು: ಶ್ರೀಮತಿ ಕಲ್ಪನಾ


ವರದಿಗಾರರು: ಶ್ರೀ ಆಕಾಶ

16 July 2026ರಂದು ಆರ್ಬಿಟ್ ಸಂಸ್ಥೆಯ ನವಜೀವನ ಲಿವ್ ಲವ್ ಲಾಫ್ (LLLF) ಕಾರ್ಯಕ್ರಮದ ವತಿಯಿಂದ ಬಸವಕಲ್ಯಾಣ ತಾಲೂಕಿನ ಪ್ರತಾಪೂರ ಗ್ರಾಮದಲ್ಲಿ ಜೈ ಭವಾನಿ ಆರೈಕೆದಾರರ ಸಂಘದ ಸಭೆ ಆಯೋಜಿಸಲಾಯಿತು. ಸಭೆಯಲ್ಲಿ ತಾಲೂಕಿನ ಕ್ಷೇತ್ರ ಮೇಲ್ವಿಚಾರಕರು ಭಾಗವಹಿಸಿ, ಸಂಘದ ಉದ್ದೇಶ ಹಾಗೂ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಆರೈಕೆದಾರರು ಫಲಾನುಭವಿಗಳ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು, ದೈನಂದಿನ ಚಟುವಟಿಕೆಗಳಲ್ಲಿ ಅವರನ್ನು ಪ್ರೋತ್ಸಾಹಿಸುವುದು ಹಾಗೂ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಅಗತ್ಯವಿರುವ ದಾಖಲೆಗಳ ಕುರಿತು ಮಾರ್ಗದರ್ಶನ ನೀಡಲಾಯಿತು. ಈ ಸಭೆಯಲ್ಲಿ ಒಟ್ಟು 8 ಮಂದಿ ಆರೈಕೆದಾರರು ಭಾಗವಹಿಸಿ, ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.



16 July 2026ರಂದು ಆರ್ಬಿಟ್ ಸಂಸ್ಥೆಯ ನವಜೀವನ (LLLF) ಕಾರ್ಯಕ್ರಮದ ವತಿಯಿಂದ ಬೀದರ್ ತಾಲೂಕಿನ ಚಾಂಬೋಳ್ ಗ್ರಾಮದಲ್ಲಿ ಛತ್ರಪತಿ ಶಿವಾಜಿ ಆರೈಕೆದಾರರ ಸಭೆ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ನೋಹಾನ್ ಅವರು ಆರೈಕೆದಾರರನ್ನು ಉದ್ದೇಶಿಸಿ ಮಾತನಾಡಿ, ಫಲಾನುಭವಿಗಳ ದೈನಂದಿನ ಆರೈಕೆ, ಸ್ವಚ್ಛತೆ, ಸಮಯಕ್ಕೆ ಸರಿಯಾಗಿ ಆಹಾರ ಹಾಗೂ ಔಷಧಿ ಸೇವನೆ ಮತ್ತು ದಿನನಿತ್ಯದ ಚಟುವಟಿಕೆಗಳಲ್ಲಿ ಅವರನ್ನು ಸ್ವಾವಲಂಬಿಗಳನ್ನಾಗಿ ಪ್ರೋತ್ಸಾಹಿಸುವ ಕುರಿತು ಮಾರ್ಗದರ್ಶನ ನೀಡಿದರು. ಪ್ರತಿ ತಿಂಗಳು ವೈದ್ಯಕೀಯ ತಪಾಸಣೆಗೆ ಕರೆತರುವಾಗ ಫಲಾನುಭವಿಗಳ ಆರೋಗ್ಯದಲ್ಲಿ ಕಂಡುಬರುವ ಬದಲಾವಣೆಗಳು ಅಥವಾ ಔಷಧಿಗಳ ಅಡ್ಡಪರಿಣಾಮಗಳ ಬಗ್ಗೆ ವೈದ್ಯರಿಗೆ ಮಾಹಿತಿ ನೀಡುವಂತೆ ತಿಳಿಸಲಾಯಿತು. ಜೊತೆಗೆ UDID ಕಾರ್ಡ್, ಮಾಸಾಶನ, ಜಾಬ್ ಕಾರ್ಡ್ ಸೇರಿದಂತೆ ವಿವಿಧ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಅಗತ್ಯ ದಾಖಲೆಗಳ ಕುರಿತು ಮಾಹಿತಿ ನೀಡಲಾಯಿತು. ಸಭೆಯಲ್ಲಿ ಆರೈಕೆದಾರರು ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.

ವರದಿಗಾರರು: ಶ್ರೀ ನೋಹಾನ್

16 July 2026ರಂದು ಆರ್ಬಿಟ್ ಸಂಸ್ಥೆಯ ನವಜೀವನ (LLLF) ಕಾರ್ಯಕ್ರಮದ ವತಿಯಿಂದ ಬೀದರ್ ತಾಲೂಕಿನ ಚಾಂಬೋಳ್ ಗ್ರಾಮದ ಶ್ರೀ ವೀರಭದ್ರೇಶ್ವರ ಪ್ರೌಢಶಾಲೆಯಲ್ಲಿ 32 ವಿದ್ಯಾರ್ಥಿಗಳಿಗೆ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ನೋಹಾನ್ ಅವರು ಕ್ಯಾನ್ಸರ್‌ನ ವಿವಿಧ ವಿಧಗಳು, ಅದರ ಲಕ್ಷಣಗಳು ಹಾಗೂ ಆರಂಭಿಕ ಹಂತದಲ್ಲಿಯೇ ರೋಗವನ್ನು ಗುರುತಿಸಿ ಚಿಕಿತ್ಸೆ ಪಡೆಯುವ ಮಹತ್ವದ ಕುರಿತು ಮಾಹಿತಿ ನೀಡಿದರು. ತಂಬಾಕು ಉತ್ಪನ್ನಗಳಿಂದ ದೂರವಿರುವುದು, ಆರೋಗ್ಯಕರ ಆಹಾರ ಸೇವಿಸುವುದು, ನಿಯಮಿತ ವ್ಯಾಯಾಮ ಮಾಡುವುದು, ಸರಿಯಾದ ದೇಹತೂಕ ಕಾಪಾಡಿಕೊಳ್ಳುವುದು ಹಾಗೂ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡಬಹುದು ಎಂದು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 32 ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.


ವರದಿಗಾರರು: ಶ್ರೀ ನೋಹಾನ್

## "ಸಮಾಜದ ಅಭಿವೃದ್ಧಿಯ ಹೆಜ್ಜೆಗುರುತುಗಳು"

# ಆರೈಕೆದಾರರಿಗೆ ಮಾನಸಿಕ ಆರೋಗ್ಯ ಮತ್ತು ಆರೈಕೆಯ ಕುರಿತು ಮಾರ್ಗದರ್ಶನ

16 July 2026ರಂದು ಕಮಲನಗರ ತಾಲೂಕಿನ ಕೋಟ್ಯಾಳ ಗ್ರಾಮದಲ್ಲಿ ಲಕ್ಷ್ಮೀ ಆರೈಕೆದಾರರ ಸಭೆ ಆಯೋಜಿಸಲಾಯಿತು. ಸಭೆಯಲ್ಲಿ ಆರೈಕೆದಾರರು ತಮ್ಮ ಅನುಭವಗಳು ಹಾಗೂ ಸವಾಲುಗಳನ್ನು ಹಂಚಿಕೊಂಡು, ಪರಸ್ಪರ ಚರ್ಚೆಯ ಮೂಲಕ ಪರಿಹಾರಗಳನ್ನು ಕಂಡುಕೊಂಡರು. ಈ ಸಂದರ್ಭದಲ್ಲಿ ಕುಮಾರಿ ಸಂಗೀತಾ ಅವರು ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮ ನಡೆಸಿ, ಮಾನಸಿಕ ಅಸ್ವಸ್ಥರ ಆರೈಕೆಯಲ್ಲಿ ಸಹನೆ, ಪ್ರೀತಿ, ಕಾಳಜಿ ಹಾಗೂ ಸೂಕ್ತ ಚಿಕಿತ್ಸೆಯ ಮಹತ್ವವನ್ನು ವಿವರಿಸಿದರು. ಜೊತೆಗೆ ಕುಟುಂಬದ ಬೆಂಬಲ ಮತ್ತು ಸಮುದಾಯದ ಸಹಕಾರದ ಅಗತ್ಯತೆಯ ಕುರಿತು ಅರಿವು ಮೂಡಿಸಲಾಯಿತು. ಆರೈಕೆದಾರರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡು, ಇಂತಹ ಸಭೆಗಳು ತಮಗೆ ಧೈರ್ಯ, ಮಾರ್ಗದರ್ಶನ ಹಾಗೂ ಬೆಂಬಲ ನೀಡುತ್ತವೆ ಎಂದು ತಿಳಿಸಿದರು. ಸಭೆಯಲ್ಲಿ ಒಟ್ಟು 8 ಮಂದಿ ಭಾಗವಹಿಸಿ ಮಾಹಿತಿಯ ಸದುಪಯೋಗ ಪಡೆದುಕೊಂಡರು.


ವರದಿಗಾರರು: ಕುಮಾರಿ ಸಂಗೀತಾ



18 July 2026ರಂದು ಹುಲಸೂರು ತಾಲೂಕಿನ ಹಾಲಹಳ್ಳಿ ಗ್ರಾಮದಲ್ಲಿ ಆರೈಕೆದಾರರ ಸಭೆಯನ್ನು ಆಯೋಜಿಸಲಾಯಿತು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ಲಕ್ಷ್ಮೀ ಅವರು ಆರೈಕೆದಾರರಿಗೆ ವೈಯಕ್ತಿಕ ಸ್ವಚ್ಛತೆ, ಸಮಯೋಚಿತ ಆರೋಗ್ಯ ತಪಾಸಣೆ, ಮಾನಸಿಕ ಆರೋಗ್ಯ, ನಿಯಮಿತ ವ್ಯಾಯಾಮ ಹಾಗೂ ಫಲಾನುಭವಿಗಳಿಗೆ ಔಷಧಿಗಳನ್ನು ನಿಯಮಿತವಾಗಿ ಸೇವಿಸುವಂತೆ ನೋಡಿಕೊಳ್ಳುವ ಕುರಿತು ಮಾರ್ಗದರ್ಶನ ನೀಡಿದರು. ಸಭೆಯಲ್ಲಿ ಆರೈಕೆದಾರರು ತಮ್ಮ ಸಮಸ್ಯೆಗಳು ಮತ್ತು ಅನುಭವಗಳನ್ನು ಹಂಚಿಕೊಂಡರು. SIR ಕುರಿತು ಮಾಹಿತಿಯನ್ನು ನೀಡುವುದರ ಜೊತೆಗೆ, ಅವರ ಪ್ರಶ್ನೆಗಳಿಗೆ ಉತ್ತರಿಸಿ ಅಗತ್ಯ ಮಾರ್ಗದರ್ಶನ ನೀಡಲಾಯಿತು.



20 July 2026ರಂದು ಬಸವಕಲ್ಯಾಣ ತಾಲೂಕಿನ ರಾಜೇಶ್ವರ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಲಿವ್ ಲವ್ ಲಾಫ್ (LLLF) ಅವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ-ಸಾಮಾಜಿಕ ಶಿಕ್ಷಣ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕೌನ್ಸಿಲರ್ ಶ್ರೀಮತಿ ರೂಪಾಲಿ ಸಾಲಗಾರೆ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಆರೈಕೆದಾರರಿಗೆ ಮಾನಸಿಕ ಹಾಗೂ ದೈಹಿಕ ಆರೋಗ್ಯ ಕಾಪಾಡಿಕೊಳ್ಳುವ ಕುರಿತು ಮಾರ್ಗದರ್ಶನ ನೀಡಿದರು. ಪ್ರತಿದಿನ ಯೋಗಾಭ್ಯಾಸ ಮತ್ತು ಆಳವಾದ ಉಸಿರಾಟದ ವ್ಯಾಯಾಮ, ವೈದ್ಯರ ಸಲಹೆಯಂತೆ ಔಷಧಿಗಳ ನಿಯಮಿತ ಸೇವನೆ, ಕುಟುಂಬದೊಂದಿಗೆ ಸಮಯ ಕಳೆಯುವುದು ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಮಹತ್ವವನ್ನು ವಿವರಿಸಲಾಯಿತು.

21 July 2026ರಂದು ಬಸವಕಲ್ಯಾಣ ತಾಲೂಕು ಆಸ್ಪತ್ರೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಲಿವ್ ಲವ್ ಲಾಫ್ (LLLF) ಕಾರ್ಯಕ್ರಮದ ವತಿಯಿಂದ ತಾಲೂಕು ವಿಶೇಷ ಚೇತನರ ಒಕ್ಕೂಟದ ಸಭೆಯನ್ನು ಆಯೋಜಿಸಲಾಯಿತು.
ಸಭೆಯಲ್ಲಿ ಆರೈಕೆದಾರರು ಹಾಗೂ ಫಲಾನುಭವಿಗಳಿಗೆ UDID ಕಾರ್ಡ್, SIR ಹಾಗೂ ಮತದಾರರ ಪಟ್ಟಿ ಪರಿಷ್ಕರಣೆ, ಮಾಸಾಶನ ಮತ್ತು ಉದ್ಯೋಗ ಖಾತ್ರಿ ಯೋಜನೆ ಸೇರಿದಂತೆ ವಿವಿಧ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು. ತೀವ್ರ ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವವರು ಆರೈಕೆದಾರರ ಸಹಾಯದೊಂದಿಗೆ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸದಲ್ಲಿ ಭಾಗವಹಿಸಬಹುದಾದ ಅವಕಾಶಗಳ ಕುರಿತು ಮಾರ್ಗದರ್ಶನ ನೀಡಲಾಯಿತು. ತಾಲೂಕು ಮೇಲ್ವಿಚಾರಕರಾದ ಶ್ರೀ ವಿಜಯಕುಮಾರ್ ಅವರು ಸಭೆಯನ್ನು ಉದ್ದೇಶಿಸಿ ಮಾಹಿತಿ ನೀಡಿದರು. ಸಭೆಯಲ್ಲಿ ಒಟ್ಟು 15 ಮಂದಿ ಭಾಗವಹಿಸಿದರು.



**“ಸೇವೆಯ ಪ್ರತಿಯೊಂದು ಹೆಜ್ಜೆಯೂ ಬದಲಾವಣೆಯ ಆರಂಭ”**

## ಗಿಡ ನೆಟ್ಟು ಪರಿಸರ ಸಂರಕ್ಷಣೆಗೆ ಕರೆ



22 July 2026ರಂದು ಭಾಲ್ಕಿ ತಾಲೂಕಿನ ಧನ್ನೂರು ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಲಿವ್ ಲವ್ ಲಾಫ್ (LLLF) ಕಾರ್ಯಕ್ರಮದ ವತಿಯಿಂದ ವನಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕೌನ್ಸಿಲರ್ ಶ್ರೀಮತಿ ರೂಪಾಲಿ ಸಾಲಗಾರೆ, ಸಿ.ಬಿ.ಆರ್. ಸಿಬ್ಬಂದಿ ಶ್ರೀ ಪ್ರಕಾಶ್ ಹಾಗೂ ಶ್ರೀಮತಿ ರೇವನಂಬಿಕಾ ಅವರು ಭಾಗವಹಿಸಿದರು. ಧನ್ನೂರು ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು, ಸಿಬ್ಬಂದಿ ಹಾಗೂ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಉಪಸ್ಥಿತಿಯಲ್ಲಿ ಗಿಡಗಳನ್ನು ನೆಟ್ಟು ಪರಿಸರ ಸಂರಕ್ಷಣೆಯ ಕುರಿತು ಅರಿವು ಮೂಡಿಸಲಾಯಿತು. ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ, ಪ್ರತಿಯೊಬ್ಬರೂ ಗಿಡಗಳನ್ನು ನೆಟ್ಟು ಬೆಳೆಸುವ ಮೂಲಕ ಹಸಿರು ಪರಿಸರ ನಿರ್ಮಾಣಕ್ಕೆ ಕೈಜೋಡಿಸುವಂತೆ ಕರೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 24 ಮಂದಿ ಭಾಗವಹಿಸಿದರು.

23 July 2026ರಂದು ಬೀದರ್ ತಾಲೂಕಿನ ನೌಬಾದ್ ಗ್ರಾಮದ ರಾಮಾಬಾಯಿ ಪ್ರೌಢಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್ ಲವ್ ಲಾಫ್ (LLLF) ಕಾರ್ಯಕ್ರಮದ ವತಿಯಿಂದ ವನಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ನವಜೀವನ ಕಾರ್ಯಕ್ರಮದ ಸಮಾಲೋಚಕರಾದ ಶ್ರೀಮತಿ ರೂಪಾಲಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಪರಿಸರ ಸಂರಕ್ಷಣೆ, ಗಿಡಮರಗಳ ಮಹತ್ವ ಹಾಗೂ ಪ್ರತಿಯೊಬ್ಬರೂ ಗಿಡಗಳನ್ನು ನೆಟ್ಟು ಪೋಷಿಸುವ ಅಗತ್ಯತೆಯ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.
ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು, ಸಿಬ್ಬಂದಿ ಹಾಗೂ ಸುಮಾರು 40 ವಿದ್ಯಾರ್ಥಿಗಳ ಉಪಸ್ಥಿತಿಯಲ್ಲಿ ಶಾಲಾ ಆವರಣದಲ್ಲಿ ಗಿಡಗಳನ್ನು ನೆಡುವ ಮೂಲಕ ವನಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.




24 July 2026ರಂದು ಭಾಲ್ಕಿ ತಾಲೂಕಿನ ನಿಟೂರ್ ಗ್ರಾಮದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾನಸಿಕ ಆರೋಗ್ಯ ಕುರಿತು ಸ್ಟೇಕ್‌ಹೋಲ್ಡರ್ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಆರ್ಬಿಟ್ ಸಂಸ್ಥೆ ಹಾಗೂ ಲಿವ್ ಲವ್ ಲಾಫ್ (LLLF) ಕಾರ್ಯಕ್ರಮದ ವತಿಯಿಂದ ನಡೆದ ತರಬೇತಿಯ ಉದ್ದೇಶ ಆರೋಗ್ಯ ಸಿಬ್ಬಂದಿಯಲ್ಲಿ ಮಾನಸಿಕ ಕಾಯಿಲೆಗಳ ಕುರಿತು ಅರಿವು ಮೂಡಿಸಿ, ಅಗತ್ಯವಿರುವವರಿಗೆ ಸೂಕ್ತ ಸೇವೆ ಒದಗಿಸಲು ಸಹಕಾರವನ್ನು ಬಲಪಡಿಸುವುದಾಗಿತ್ತು. ಜಿಲ್ಲಾ ಕಾರ್ಯಕ್ರಮ ಸಂಯೋಜಕರಾದ ಫಾ. ಯಾನ್ಸಿ ಅವರು ಮಾನಸಿಕ ಕಾಯಿಲೆಯ ಅರ್ಥ, ಸಾಮಾನ್ಯ ಲಕ್ಷಣಗಳು ಹಾಗೂ ಚಿಕಿತ್ಸೆಯ ಮಹತ್ವದ ಕುರಿತು ಮಾಹಿತಿ ನೀಡಿದರು. ಅಗತ್ಯವಿರುವವರಿಗೆ ಸರ್ಕಾರದ ವತಿಯಿಂದ ಲಭ್ಯವಿರುವ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಸೇವೆಗಳ ಕುರಿತು ತಿಳಿಸಿ, ಸಂಸ್ಥೆಯೊಂದಿಗೆ ಸಮನ್ವಯದಿಂದ ಸಮುದಾಯಕ್ಕೆ ಸೇವೆ ನೀಡುವಂತೆ ಕರೆ ನೀಡಿದರು.







24 July 2026ರಂದು ಬಸವಕಲ್ಯಾಣ ತಾಲೂಕಿನ ರಾಜೋಳಾ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಲಿವ್ ಲವ್ ಲಾಫ್ (LLLF) ಕಾರ್ಯಕ್ರಮದ ವತಿಯಿಂದ ವನಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಮಕ್ಕಳಲ್ಲಿ ಪರಿಸರ ಸಂರಕ್ಷಣೆ ಹಾಗೂ ಜಾಗತಿಕ ತಾಪಮಾನ ನಿಯಂತ್ರಣದ ಕುರಿತು ಅರಿವು ಮೂಡಿಸುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿತ್ತು. ತಾಲೂಕು ಮೇಲ್ವಿಚಾರಕರಾದ ಶ್ರೀ ವಿಜಯಕುಮಾರ್ ಅವರು ಮರಗಳ ಮಹತ್ವ, ಪ್ರಕೃತಿ ಸಂರಕ್ಷಣೆ ಹಾಗೂ ಪ್ರತಿಯೊಂದು ಮನೆಯಲ್ಲೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಪೋಷಿಸುವ ಅಗತ್ಯತೆಯ ಕುರಿತು ಮಾಹಿತಿ ನೀಡಿದರು. ವಿದ್ಯಾರ್ಥಿಗಳು ತಮ್ಮ ಪ್ರಶ್ನೆಗಳನ್ನು ಕೇಳಿ, ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಮಾಹಿತಿಯನ್ನು ಪಡೆದುಕೊಂಡರು.
ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು, ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಮಹಾದೇವ ಮಾನಕರೆ ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 35 ಮಂದಿ ಭಾಗವಹಿಸಿದರು.

**“ಕೈಜೋಡಿಸೋಣ • ಬದಲಾವಣೆ ತರೋಣ • ಸಮಾಜ ಕಟ್ಟೋಣ”**

## ಕೌಶಲ್ಯಾಭಿವೃದ್ಧಿಯ ಮೂಲಕ ಸ್ವಾವಲಂಬನೆಯತ್ತ ಹೆಜ್ಜೆ




27 July 2026ರಂದು ಔರಾದ್ ತಾಲೂಕಿನ ಸಂತಪುರ ಗ್ರಾಮದಲ್ಲಿ ಲಿವ್ ಲವ್ ಲಾಫ್ (LLLF) ಕಾರ್ಯಕ್ರಮದ ವತಿಯಿಂದ ವೃತ್ತಿಪರ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. LLLF ಕಾರ್ಯಕ್ರಮದ ಪ್ರೋಗ್ರಾಂ ಮ್ಯಾನೇಜರ್ ಫಾ. ಯಾನ್ಸಿ ಹಾಗೂ ದೀಪಾಲಯ ಸಮಾಜ ಸೇವಾ ಸಂಸ್ಥೆಯ ನಿರ್ದೇಶಕರಾದ ಸಿಸ್ಟರ್ ಲೀನೆಟ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ತರಬೇತಿಗೆ ಚಾಲನೆ ನೀಡಿದರು. ಮಾನಸಿಕ ಆರೋಗ್ಯ ಸಮಸ್ಯೆಗಳಿಂದ ಪ್ರಭಾವಿತರಾದ ಫಲಾನುಭವಿಗಳ ಆರೈಕೆದಾರರಿಗೆ ಕೌಶಲ್ಯಾಭಿವೃದ್ಧಿಯ ಮೂಲಕ ಆರ್ಥಿಕ ಸ್ವಾವಲಂಬನೆ ಸಾಧಿಸಲು ಈ ತರಬೇತಿಯನ್ನು ಆಯೋಜಿಸಲಾಗಿದೆ. ತರಬೇತಿಯ ಮೂಲಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಂಡು ಸ್ವಾವಲಂಬಿ ಜೀವನ ರೂಪಿಸಿಕೊಳ್ಳುವಂತೆ ಅತಿಥಿಗಳು ಪ್ರೇರೇಪಿಸಿದರು. ಶಿಸ್ತು, ಸಮಯಪಾಲನೆ ಹಾಗೂ ನಿರಂತರ ಅಭ್ಯಾಸವು ಯಶಸ್ಸಿಗೆ ಪ್ರಮುಖವಾದ ಅಂಶಗಳಾಗಿವೆ ಎಂದು ತಿಳಿಸಲಾಯಿತು.

27 July 2026ರಂದು ಭಾಲ್ಕಿ ತಾಲೂಕಿನ ವಾರವಟ್ಟಿ (ಬಿ) ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಲಿವ್ ಲವ್ ಲಾಫ್ (LLLF) ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಅಂಗನವಾಡಿ ಕಾರ್ಯಕರ್ತರಿಗೆ ICDS ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ತರಬೇತಿಯಲ್ಲಿ LLLF ಕಾರ್ಯಕ್ರಮದ ಭಾಲ್ಕಿ ತಾಲೂಕು ಮೇಲ್ವಿಚಾರಕರಾದ ಶ್ರೀ ಪ್ರಕಾಶ್, ಆಪ್ತಸಮಾಲೋಚಕಿ ಶ್ರೀಮತಿ ರೂಪಾಲಿ ಸಾಲಗಾರೆ ಹಾಗೂ ಕಾರ್ಯಕರ್ತೆ ಶ್ರೀಮತಿ ಕಲ್ಪನಾ ಅವರು ಭಾಗವಹಿಸಿದರು. ಮಾನಸಿಕ ಕಾಯಿಲೆಯ ಲಕ್ಷಣಗಳು, ಆರಂಭಿಕ ಹಂತದಲ್ಲಿಯೇ ಗುರುತಿಸುವುದು, ಸೂಕ್ತ ಚಿಕಿತ್ಸೆಯ ಅಗತ್ಯತೆ ಹಾಗೂ ಮಾನಸಿಕ ಕಾಯಿಲೆಗೆ ಸಂಬಂಧಿಸಿದ ತಪ್ಪು ಕಲ್ಪನೆಗಳನ್ನು ನಿವಾರಿಸುವ ಕುರಿತು ಮಾಹಿತಿ ನೀಡಲಾಯಿತು. ಮಾನಸಿಕ ಕಾಯಿಲೆಗೆ ಚಿಕಿತ್ಸೆ ಲಭ್ಯವಿದ್ದು, ಸೂಕ್ತ ಚಿಕಿತ್ಸೆಯಿಂದ ಚೇತರಿಸಿಕೊಳ್ಳಲು ಸಾಧ್ಯ ಎಂದು ತಿಳಿಸಲಾಯಿತು.



29 July 2026ರಂದು ಔರಾದ್ ತಾಲೂಕಿನ ಸಂತಪುರದ CDPO ಕಚೇರಿಯಲ್ಲಿ ಅಂಗನವಾಡಿ ಕಾರ್ಯಕರ್ತರಿಗೆ ಮಾನಸಿಕ ಆರೋಗ್ಯ ಮತ್ತು ಮಾನಸಿಕ ಅಸ್ವಸ್ಥತೆ ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. LLLF ಕಾರ್ಯಕ್ರಮದ ಪ್ರೋಗ್ರಾಂ ಮ್ಯಾನೇಜರ್ ಫಾ. ಯಾನ್ಸಿ ಹಾಗೂ ಔರಾದ್ ತಾಲೂಕು ಮೇಲ್ವಿಚಾರಕರಾದ ಶ್ರೀ ಯೋಹಾನ್ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದರು. ತರಬೇತಿಯಲ್ಲಿ ಮಾನಸಿಕ ಆರೋಗ್ಯ, ಮಾನಸಿಕ ಅಸ್ವಸ್ಥತೆಯ ಪ್ರಮುಖ ಲಕ್ಷಣಗಳು, ಆರಂಭಿಕ ಗುರುತಿಸುವಿಕೆ, ಚಿಕಿತ್ಸೆ ಹಾಗೂ ಪುನರ್ವಸತಿಯ ಕುರಿತು ಮಾಹಿತಿ ನೀಡಲಾಯಿತು. ಮಾನಸಿಕ ಅಸ್ವಸ್ಥತೆಯ ಕುರಿತು ಇರುವ ಮೂಢನಂಬಿಕೆಗಳು ಮತ್ತು ತಪ್ಪು ಕಲ್ಪನೆಗಳನ್ನು ದೂರ ಮಾಡಿ, ಕುಟುಂಬದ ಬೆಂಬಲ ಹಾಗೂ ಸಮಾಜದ ಸಹಕಾರದ ಮಹತ್ವವನ್ನು ತಿಳಿಸಲಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ಅಂಗನವಾಡಿ ಕಾರ್ಯಕರ್ತರು ಮಾನಸಿಕ ಅಸ್ವಸ್ಥತೆಯ ಲಕ್ಷಣಗಳನ್ನು ಆರಂಭಿಕ ಹಂತದಲ್ಲೇ ಗುರುತಿಸಿ, ಅಗತ್ಯವಿರುವವರನ್ನು ಸೂಕ್ತ ಆರೋಗ್ಯ ಸೇವೆಗಳಿಗೆ ಸಂಪರ್ಕಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ತಿಳಿಸಲಾಯಿತು. ತರಬೇತಿಯಲ್ಲಿ ಒಟ್ಟು 80 ಅಂಗನವಾಡಿ ಕಾರ್ಯಕರ್ತರು ಸಕ್ರಿಯವಾಗಿ ಭಾಗವಹಿಸಿ ತಮ್ಮ ಸಂದೇಹಗಳಿಗೆ ಅಗತ್ಯ ಮಾರ್ಗದರ್ಶನ ಪಡೆದುಕೊಂಡರು.





**"ಅಂಗನವಾಡಿ ಕಾರ್ಯಕರ್ತರಿಗೆ ಮಾನಸಿಕ ಆರೋಗ್ಯ ಜಾಗೃತಿ"**

**"ಬದಲಾವಣೆಯ ಕನಸು ಕಂಡು, ಸೇವೆಯ ಮೂಲಕ ಸಾಕಾರಗೊಳಿಸುವ ಪಯಣ"**

# ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮ (ಆರ್ಬಿಟ್ ಸಂಸ್ಥೆ)

## 🌱 ವನಮಹೋತ್ಸವ ಕಾರ್ಯಕ್ರಮ

18 ಜುಲೈ 2026ರಂದು ಹುಮ್ನಾಬಾದ್ ತಾಲೂಕಿನ ಜೋಶಿಗಲ್ಲಿ ಅಂಗನವಾಡಿ ಕೇಂದ್ರದಲ್ಲಿ ವನಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಒಟ್ಟು 17 ಮಹಿಳೆಯರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಗಿಡಗಳ ಮಹತ್ವ ಹಾಗೂ ಪರಿಸರ ಸಂರಕ್ಷಣೆಯಲ್ಲಿ ಅವುಗಳ ಪಾತ್ರದ ಕುರಿತು ಮಹಿಳೆಯರಿಗೆ ಮಾಹಿತಿ ನೀಡಲಾಯಿತು. ಗಿಡಗಳು ನಮಗೆ ಆಮ್ಲಜನಕವನ್ನು ಒದಗಿಸುವುದರ ಜೊತೆಗೆ, ಕಾರ್ಬನ್ ಡೈಆಕ್ಸೈಡ್ ಅನ್ನು ಹೀರಿಕೊಂಡು ವಾಯುಮಾಲಿನ್ಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ ಎಂದು ತಿಳಿಸಲಾಯಿತು. ಅಲ್ಲದೆ, ಗಿಡಗಳು ಪರಿಸರ ಮತ್ತು ಹವಾಮಾನ ಸಂರಕ್ಷಣೆ, ಮಳೆಯ ಪ್ರಮಾಣ ಸಮತೋಲನ, ನೆರಳು ಹಾಗೂ ತಂಪಾದ ವಾತಾವರಣ ನಿರ್ಮಾಣ ಮತ್ತು ಭೂಮಿಯ ತಾಪಮಾನ ನಿಯಂತ್ರಣಕ್ಕೆ ಪ್ರಮುಖವಾಗಿವೆ. ಗಿಡಗಳಿಂದ ದೊರೆಯುವ ವಿವಿಧ ಆರ್ಥಿಕ ಹಾಗೂ ಸಾಮಾಜಿಕ ಪ್ರಯೋಜನಗಳ ಬಗ್ಗೆಯೂ ಅರಿವು ಮೂಡಿಸಲಾಯಿತು.





23 July 2026ರಂದು ಬೀದರ್ ಜಿಲ್ಲೆಯ ಹುಮನಾಬಾದ್ ತಾಲೂಕಿನ ಕುಮಾರಚಿಂಚೋಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಸಹಯೋಗದಲ್ಲಿ ವನಮಹೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ನವಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀಮತಿ ಪೂಜಾ, ಶಾಲೆಯ ಮುಖ್ಯೋಪಾಧ್ಯಾಯರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು.
ಶಾಲಾ ಆವರಣದಲ್ಲಿ ವಿವಿಧ ಸಸಿಗಳನ್ನು ನೆಟ್ಟು, ಪರಿಸರ ಸಂರಕ್ಷಣೆ ಹಾಗೂ ಮರಗಳ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು. ವಿದ್ಯಾರ್ಥಿಗಳು ಉತ್ಸಾಹದಿಂದ ಸಸಿಗಳನ್ನು ನೆಟ್ಟು, ಅವುಗಳನ್ನು ಸಂರಕ್ಷಿಸುವ ಸಂಕಲ್ಪ ಮಾಡಿದರು.



24 July 2026ರಂದು ಹುಮನಾಬಾದ್ ತಾಲೂಕಿನ ಹಳ್ಳಿಖೇಡ್ (ಬಿ) ಗ್ರಾಮದ ಸಮುದಾಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ವತಿಯಿಂದ 79 ಫಲಾನುಭವಿಗಳು ಮನೋವೈದ್ಯರಿಂದ ಚಿಕಿತ್ಸೆ ಪಡೆದುಕೊಂಡರು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ವೈದ್ಯರ ಸಲಹೆಯಂತೆ ಔಷಧಿಗಳನ್ನು ನಿಯಮಿತವಾಗಿ ಸೇವಿಸುವುದು ಹಾಗೂ ಪ್ರತಿ ತಿಂಗಳು ವೈದ್ಯರನ್ನು ಭೇಟಿ ಮಾಡಿ ಚಿಕಿತ್ಸೆಯನ್ನು ಮುಂದುವರಿಸುವಂತೆ ಸಲಹೆ ನೀಡಿದರು.

## ಮಹಿಳಾ ಸಬಲೀಕರಣ ಯೋಜನೆ

20 July 2026ರಂದು ಗೊರ್ನಳ್ಳಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಪ್ರಿಯಾ ಜ್ಯೋತಿ ಹಾಗೂ ಸಾಧನ ಸಂಘದಲ್ಲಿ ವನಮಹೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು. ಮರಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆ, ಅರಣ್ಯೀಕರಣ ಹಾಗೂ ಪರಿಸರ ಸಮತೋಲನ ಕಾಪಾಡುವ ಕುರಿತು ಜಾಗೃತಿ ಮೂಡಿಸಲಾಯಿತು. ಮರಗಳ ಮಹತ್ವ, ಅರಣ್ಯ ನಾಶದಿಂದಾಗುವ ಹಾನಿ ಹಾಗೂ ಜಾಗತಿಕ ತಾಪಮಾನ ಮತ್ತು ಹವಾಮಾನ ವೈಪರೀತ್ಯವನ್ನು ನಿಯಂತ್ರಿಸುವಲ್ಲಿ ಮರಗಳ ಪಾತ್ರದ ಕುರಿತು ಮಾಹಿತಿ ನೀಡಲಾಯಿತು. ವನಮಹೋತ್ಸವದ ಅಂಗವಾಗಿ ಪ್ರತಿಯೊಬ್ಬರೂ ಗಿಡಗಳನ್ನು ನೆಟ್ಟು, ಅವುಗಳನ್ನು ಪೋಷಿಸುವ ಮೂಲಕ ಹಸಿರು ಪರಿಸರ ನಿರ್ಮಾಣಕ್ಕೆ ಕೈಜೋಡಿಸುವಂತೆ ಕರೆ ನೀಡಲಾಯಿತು.





**"ಒಂದು ಗಿಡ ನೆಡಿ – ಭವಿಷ್ಯಕ್ಕೆ ಉಸಿರು ನೀಡಿ"**

## "ಸ್ಪರ್ಶ" ಕ್ಯಾನ್ಸರ್ ಕಾರ್ಯಕ್ರಮ

## "ವಿದ್ಯಾರ್ಥಿಗಳಿಗೆ ಕ್ಯಾನ್ಸರ್ ಜಾಗೃತಿ"

23 ಜುಲೈ 2026ರಂದು ಬೀದರ್ ತಾಲೂಕಿನ ನೌಬಾದ್ ಗ್ರಾಮದ ಡಾ. ರಾಜಕುಮಾರ್ ಪ್ರೌಢಶಾಲೆಯಲ್ಲಿ ಆರ್ಬಿಟ್ ಸೇವಾ ಸಂಸ್ಥೆಯ ವತಿಯಿಂದ ಸ್ಪರ್ಶ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸ್ಪರ್ಶ ಕ್ಯಾನ್ಸರ್ ಜಾಗೃತಿ ಸಂಯೋಜಕರಾದ ಶ್ರೀ ಯೋಹಾನ್ ವಾಲಿ ಅವರು ವಿದ್ಯಾರ್ಥಿಗಳಿಗೆ ಕ್ಯಾನ್ಸರ್‌ನ ಕಾರಣಗಳು, ಲಕ್ಷಣಗಳು, ವಿಧಗಳು, ಹಂತಗಳು ಹಾಗೂ ತಡೆಗಟ್ಟುವ ಕ್ರಮಗಳ ಕುರಿತು ಮಾಹಿತಿ ನೀಡಿದರು. ಆರೋಗ್ಯಕರ ಆಹಾರ, ಉತ್ತಮ ಜೀವನಶೈಲಿ ಹಾಗೂ ನಿಯಮಿತ ಆರೋಗ್ಯ ತಪಾಸಣೆಯ ಮಹತ್ವವನ್ನು ತಿಳಿಸಲಾಯಿತು. ದೇಹದಲ್ಲಿ ಯಾವುದೇ ಅಸಾಮಾನ್ಯ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ವೈದ್ಯರ ಸಲಹೆ ಪಡೆದು ಸೂಕ್ತ ಚಿಕಿತ್ಸೆ ಪಡೆಯುವಂತೆ ವಿದ್ಯಾರ್ಥಿಗಳಿಗೆ ತಿಳಿಸಲಾಯಿತು.





6 ಜುಲೈ 2026ರಂದು ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನಲ್ಲಿ ಬೆಳದಿಂಗಳು ಜಿಲ್ಲಾ ಒಕ್ಕೂಟ ಸಭೆ ನಡೆಯಿತು. ಸಭೆಯಲ್ಲಿ ಮಹಿಳಾ ಸಬಲೀಕರಣ ಸಂಯೋಜಕಿ ಶ್ರೀಮತಿ ನಿರ್ಮಲ ಅವರು ಜಿಲ್ಲಾ ಒಕ್ಕೂಟ ಬಲವರ್ಧನೆ ಕುರಿತು ತರಬೇತಿ ನೀಡಿದರು. ತಾಲೂಕು ಹಾಗೂ ಮಹಾಸಂಘಗಳನ್ನು ಬಲಪಡಿಸುವುದು, ಸದಸ್ಯರು ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುವುದು ಹಾಗೂ ಸ್ಥಳೀಯ ಸಮಸ್ಯೆಗಳನ್ನು ಒಕ್ಕೂಟದ ಮೂಲಕ ಪರಿಹರಿಸಿಕೊಳ್ಳುವ ಕುರಿತು ಚರ್ಚಿಸಲಾಯಿತು. ಸಿಸ್ಟರ್ ಶೀಲಾ ಅವರು ಸಂಘಗಳ ಸಭೆ ಹಾಗೂ ತರಬೇತಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ತಿಳಿಸಿದರು. ಶ್ರೀಮತಿ ಭಾಗ್ಯಶ್ರೀ ಅವರು SIR ಹಾಗೂ ಮತದಾರರ ಪಟ್ಟಿಯಲ್ಲಿ ಹೆಸರು ಪರಿಶೀಲಿಸುವ ಕುರಿತು ಮಾಹಿತಿ ನೀಡಿದರು.

08 ಜುಲೈ 2026ರಂದು ಚಿಟಗುಪ್ಪ ತಾಲೂಕಿನ ಕೋಡಂಬಲ್ ಗ್ರಾಮದಲ್ಲಿ, ಗುಲಾಬಿ ಮಹಾಸಂಘದ ಸದಸ್ಯರಿಗೆ ಪಂಚಾಯತ್ ರಾಜ್ ಕುರಿತು ತರಬೇತಿ ಆಯೋಜಿಸಲಾಯಿತು. ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕಿ ಶ್ರೀಮತಿ ನಿರ್ಮಲ ಹಾಗೂ ಸಮೃದ್ಧಿ ಯೋಜನೆಯ ಸಂಯೋಜಕ ಶ್ರೀ ಚಿನ್ನಪ್ಪ ಅವರು ಪಂಚಾಯತ್ ರಾಜ್ ವ್ಯವಸ್ಥೆ, ಮತದಾನದ ಮಹತ್ವ ಹಾಗೂ ಚುನಾವಣೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಕುರಿತು ಮಾಹಿತಿ ನೀಡಿದರು.
ತರಬೇತಿಯಲ್ಲಿ ಮಹಿಳೆಯರು ಸ್ಥಳೀಯ ಆಡಳಿತದ ಕುರಿತು ಅರಿವು ಪಡೆದುಕೊಂಡು, ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೇರಣೆ ಪಡೆದರು.






11 ಜುಲೈ 2026ರಂದು ಚಿಟಗುಪ್ಪ ತಾಲೂಕಿನ ಕನ್ಯಾ ಪದವಿ ಪೂರ್ವ ಕಾಲೇಜಿನಲ್ಲಿ ಶ್ರೀಮತಿ ರೀಟಾ ಅವರ ನೇತೃತ್ವದಲ್ಲಿ ಲಿಂಗ ಸಮಾನತೆ ಕುರಿತು ತರಬೇತಿ ಆಯೋಜಿಸಲಾಯಿತು. ತರಬೇತಿಯಲ್ಲಿ ಲಿಂಗ ಮತ್ತು ಲಿಂಗತ್ವದ ನಡುವಿನ ವ್ಯತ್ಯಾಸ, ಸಮಾಜದಲ್ಲಿರುವ ಲಿಂಗಾಧಾರಿತ ಆಚರಣೆಗಳು, ನಂಬಿಕೆಗಳು ಹಾಗೂ ಅಸಮಾನತೆಗಳ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು. ಇಂತಹ ಅಸಮಾನತೆಗಳನ್ನು ಹೋಗಲಾಡಿಸಲು ಶಿಕ್ಷಣ ಪ್ರಮುಖ ಸಾಧನವಾಗಿದೆ ಎಂದು ತಿಳಿಸಲಾಯಿತು. ಶ್ರೀ ನೀಲಕಂಠ ಅವರು ಶಿಕ್ಷಣದ ಮೂಲಕ ಅನೈತಿಕ ಪದ್ಧತಿಗಳನ್ನು ತೊರೆದು, ವಿದ್ಯಾರ್ಥಿಗಳು ತಮ್ಮನ್ನು ತಾವು ಸಬಲರನ್ನಾಗಿ ಮಾಡಿಕೊಳ್ಳುವಂತೆ ಪ್ರೇರೇಪಿಸಿದರು.

13 ಜುಲೈ 2026ರಂದು ಹುಮ್ನಾಬಾದ್ ತಾಲೂಕಿನ ಸೀತಾಳಗೇರ ಗ್ರಾಮದಲ್ಲಿ ಶ್ರೀಮತಿ ಅಮಿತಾ ಅವರ ನೇತೃತ್ವದಲ್ಲಿ ಮಹಾಸಂಘ ಬಲವರ್ಧನೆ ಕುರಿತು ತರಬೇತಿ ಆಯೋಜಿಸಲಾಯಿತು. ಸಂಪನ್ಮೂಲ ವ್ಯಕ್ತಿಯಾದ ಶ್ರೀಮತಿ ಭಾಗ್ಯಶ್ರೀ, ರಾಜ್ಯಮಟ್ಟದ ಒಕ್ಕೂಟದ ಸದಸ್ಯರು, ಸಂಘ ಹಾಗೂ ಮಹಾಸಂಘಗಳನ್ನು ಬಲಪಡಿಸುವುದು, ಕುಸಿದಿರುವ ಸಂಘಗಳನ್ನು ಪುನಶ್ಚೇತನಗೊಳಿಸುವುದು ಮತ್ತು ಹೊಸ ಸಂಘಗಳನ್ನು ರಚಿಸಿ ಮಹಾಸಂಘಕ್ಕೆ ಸೇರಿಸುವ ಕುರಿತು ಮಾಹಿತಿ ನೀಡಿದರು. ಗ್ರಾಮದ ಸಮಸ್ಯೆಗಳನ್ನು ಗುರುತಿಸಿ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವ ಮೂಲಕ ಪರಿಹಾರ ಕಂಡುಕೊಳ್ಳುವಂತೆ ಹಾಗೂ SIR ಕುರಿತು ಅಗತ್ಯ ಮಾಹಿತಿಯನ್ನು ನೀಡಲಾಯಿತು. ತರಬೇತಿಯಲ್ಲಿ ಉದಯ ಮಹಾಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಭಾಗವಹಿಸಿದರು.



## “ಸ್ಪಂದಿಸುವ ಹೃದಯಗಳು, ಬದಲಾಗುವ ಬದುಕುಗಳು”

## "ಶಿಕ್ಷಣವೇ ಸಮಾನತೆಯ ಬದಲಾವಣೆಯ ಶಕ್ತಿ"






14 ಜುಲೈ 2026ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಕೇಡ್ ಬಿ ಗ್ರಾಮದ ಬಾಯಿ ಬನ್ಸಿಲಾಲ್ ಪ್ರೌಢಶಾಲೆ ಹಾಗೂ ಬಸವತೀರ್ಥ ವಿದ್ಯಾಪೀಠ ಪದವಿ ಪೂರ್ವ ಕಾಲೇಜಿನಲ್ಲಿ ಲಿಂಗ ಸಮಾನತೆ ಕುರಿತು ತರಬೇತಿ ಆಯೋಜಿಸಲಾಯಿತು. ಶ್ರೀಮತಿ ರೀಟಾ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಗಂಡು ಮತ್ತು ಹೆಣ್ಣು ಮಕ್ಕಳಿಗೆ ಸಮಾನ ಶಿಕ್ಷಣ, ಅವಕಾಶಗಳು ಹಾಗೂ ಜವಾಬ್ದಾರಿಗಳು ದೊರೆಯಬೇಕು ಎಂದು ತಿಳಿಸಿದರು. ಲಿಂಗ ಮತ್ತು ಲಿಂಗತ್ವದ ನಡುವಿನ ವ್ಯತ್ಯಾಸ ಹಾಗೂ ಸಮಾಜದಲ್ಲಿರುವ ಲಿಂಗಾಧಾರಿತ ಆಚರಣೆಗಳು ಮತ್ತು ಕಟ್ಟುಪಾಡುಗಳ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು. ಇಂತಹ ಅಸಮಾನತೆಗಳನ್ನು ಶಿಕ್ಷಣದ ಮೂಲಕ ಬದಲಾಯಿಸಬಹುದು. ಆದ್ದರಿಂದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವಂತೆ ಪ್ರೇರೇಪಿಸಲಾಯಿತು. ತರಬೇತಿಯಲ್ಲಿ 227 ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗವಹಿಸಿದರು.

# "ಪರಿಸರ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ"







16 ಜುಲೈ 2026ರಂದು ಭಾಲ್ಕಿ ತಾಲೂಕಿನ ಬೀರದೇವರ ಗಲ್ಲಿಯ ಜ್ಞಾನಜ್ಯೋತಿ ಮಹಾಸಂಘದ ಸಭೆಯಲ್ಲಿ, ಮಹಿಳಾ ಸಬಲೀಕರಣ ಕಾರ್ಯಕ್ರಮದ ಕಾರ್ಯಕರ್ತೆ ಶ್ರೀಮತಿ ಸುಜಾತಾ ಅವರ ನೇತೃತ್ವದಲ್ಲಿ ವನಮಹೋತ್ಸವ ಕಾರ್ಯಕ್ರಮ ಆಯೋಜಿಸಲಾಯಿತು. ಕಾರ್ಯಕ್ರಮವನ್ನು ಸಿಸ್ಟರ್ ಶೀಲಾ ಅವರು ಉದ್ಘಾಟಿಸಿ, "ಪರಿಸರ ಉಳಿದರೆ ಮಾತ್ರ ನಮ್ಮ ಬದುಕು ಸುರಕ್ಷಿತ" ಎಂಬ ಸಂದೇಶ ನೀಡಿದರು. ಪರಿಸರದ ಮಹತ್ವ, ಮರಗಳ ಅಗತ್ಯತೆ ಹಾಗೂ ಮುಂದಿನ ಪೀಳಿಗೆಗಾಗಿ ಹಸಿರು ಪರಿಸರವನ್ನು ಉಳಿಸುವ ಜವಾಬ್ದಾರಿಯ ಕುರಿತು ಸದಸ್ಯರಿಗೆ ಅರಿವು ಮೂಡಿಸಿದರು. "ಮರ ನೆಡುವುದು ಮಾತ್ರವಲ್ಲ, ನೆಟ್ಟ ಮರವನ್ನು ಬೆಳೆಸಿ ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ" ಎಂದು ತಿಳಿಸಿ, ಪ್ರತಿಯೊಬ್ಬ ಸದಸ್ಯರೂ ಪರಿಸರ ಸಂರಕ್ಷಣೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಕರೆ ನೀಡಲಾಯಿತು. ಜ್ಞಾನಜ್ಯೋತಿ ಮಹಾಸಂಘದ ಸದಸ್ಯರು ಮರಗಳನ್ನು ನೆಟ್ಟು ಬೆಳೆಸುವ ಹಾಗೂ ಸಂರಕ್ಷಿಸುವ ಪ್ರತಿಜ್ಞೆ ಕೈಗೊಂಡರು. ಪರಿಸರ ಸಂರಕ್ಷಣೆಯ ಸಂಕಲ್ಪದೊಂದಿಗೆ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.ಶ್ರೀಮತಿ ಲಲಿತಾ ಅವರು ಧನ್ಯವಾದ ಅರ್ಪಿಸುವುದರೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

**"ನಮ್ಮ ಸೇವೆ, ಅವರ ನಗು, ಸಮಾಜದ ಹೊಸ ನಾಳೆ"**

## “ಶಿಕ್ಷಣವೇ ಸಮಾನತೆಯ ಬದಲಾವಣೆಯ ಶಕ್ತಿ”






21 ಜುಲೈ 2026ರಂದು ಚಿಟಗುಪ್ಪ ತಾಲೂಕಿನ ಗಾಂಧಿನಗರ ಗ್ರಾಮದ ಸೆಂಟ್ ಮೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಮಕ್ಕಳಿಗಾಗಿ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಯೋಹಾನ್ ಅವರು ಕ್ಯಾನ್ಸರ್‌ನ ವಿಧಗಳು, ಪ್ರಮುಖ ಲಕ್ಷಣಗಳು ಹಾಗೂ ತಡೆಗಟ್ಟುವ ಕ್ರಮಗಳ ಕುರಿತು ಮಾಹಿತಿ ನೀಡಿದರು. ತಂಬಾಕು, ಗುಟ್ಕಾ, ಪಾನ್ ಮಸಾಲಾ ಹಾಗೂ ಮದ್ಯಪಾನದಂತಹ ಹಾನಿಕಾರಕ ಅಭ್ಯಾಸಗಳಿಂದ ದೂರವಿದ್ದು, ಆರೋಗ್ಯಕರ ಆಹಾರ ಮತ್ತು ಜೀವನಶೈಲಿಯನ್ನು ರೂಢಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು. ನಿರಂತರ ಆಯಾಸ, ತೂಕ ಇಳಿಕೆ, ಗಂಟುಗಳು, ನಿರಂತರ ನೋವು, ಜ್ವರ ಹಾಗೂ ಚರ್ಮದಲ್ಲಿನ ಬದಲಾವಣೆಗಳಂತಹ ಲಕ್ಷಣಗಳು ಕಂಡುಬಂದರೆ ವೈದ್ಯರನ್ನು ಸಂಪರ್ಕಿಸಿ ಸೂಕ್ತ ತಪಾಸಣೆ ಮಾಡಿಸಿಕೊಳ್ಳುವ ಅಗತ್ಯವನ್ನು ತಿಳಿಸಲಾಯಿತು. ಕ್ಯಾನ್ಸರ್ ಸಾಂಕ್ರಾಮಿಕ ರೋಗವಲ್ಲ ಎಂಬುದರ ಬಗ್ಗೆಯೂ ಮಕ್ಕಳಿಗೆ ಅರಿವು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ 57 ವಿದ್ಯಾರ್ಥಿಗಳು ಭಾಗವಹಿಸಿ ಕ್ಯಾನ್ಸರ್‌ನಿಂದಾಗುವ ದುಷ್ಪರಿಣಾಮಗಳು ಹಾಗೂ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಅರಿವು ಪಡೆದರು.

## “ಸಮಾನ ಶಿಕ್ಷಣ - ಸಮಾನ ಅವಕಾಶ - ಸಮಾನ ಗೌರವ”






28 ಜುಲೈ 2026ರಂದು ಭಾಲ್ಕಿ ತಾಲೂಕಿನ ಕೋಸಂ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಲಿಂಗ ಸಮಾನತೆ ಕುರಿತು ಜಾಗೃತಿ ತರಬೇತಿ ಆಯೋಜಿಸಲಾಯಿತು. ಶಾಲೆಯ ಮುಖ್ಯಶಿಕ್ಷಕರು ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಂತರ, ಲಿಂಗ ಸಮಾನತೆ ಆಂತರಿಕ ತಂಡದ ಸದಸ್ಯರಾದ ಶ್ರೀ ಪ್ರಕಾಶ್ ಅವರು ಲಿಂಗ ಸಮಾನತೆಯ ಮಹತ್ವದ ಕುರಿತು ಮಾಹಿತಿ ನೀಡಿದರು. ಗಂಡು-ಹೆಣ್ಣು ಎಂಬ ಭೇದವಿಲ್ಲದೆ ಸಮಾನ ಶಿಕ್ಷಣ, ಸಮಾನ ಅವಕಾಶ, ಸಮಾನ ಕೆಲಸ ಹಾಗೂ ಸಮಾನ ಗೌರವ ನೀಡುವ ಅಗತ್ಯವನ್ನು ವಿವರಿಸಿದರು. ಕುಟುಂಬದಿಂದಲೇ ಲಿಂಗಭೇದವನ್ನು ತೊಡೆದುಹಾಕಿ, ಮಕ್ಕಳಿಗೆ ಸಮಾನ ಪ್ರೀತಿ ಮತ್ತು ಅವಕಾಶಗಳನ್ನು ನೀಡುವ ಮೂಲಕ ಸಮಾಜದಲ್ಲಿ ಉತ್ತಮ ಬದಲಾವಣೆ ತರಬಹುದು ಎಂದು ತಿಳಿಸಲಾಯಿತು. ಮಹಿಳೆಯರ ಶಿಕ್ಷಣ ಮತ್ತು ಸಬಲೀಕರಣಕ್ಕಾಗಿ ಸರ್ಕಾರದ ವಿವಿಧ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು. ತರಬೇತಿಯಲ್ಲಿ 114 ವಿದ್ಯಾರ್ಥಿಗಳು ಹಾಗೂ 10 ಶಿಕ್ಷಕರು ಭಾಗವಹಿಸಿದರು. ಸಹಶಿಕ್ಷಕರಾದ ಶ್ರೀ ಚಂದ್ರಶೇಖರ್ ಅವರು ಧನ್ಯವಾದ ಅರ್ಪಿಸುವುದರೊಂದಿಗೆ ತರಬೇತಿ ಮುಕ್ತಾಯಗೊಂಡಿತು.

## “ಮಾನವೀಯ ಮೌಲ್ಯಗಳೊಂದಿಗೆ ಆಶಾದಾಯಕ ಭವಿಷ್ಯ ನಿರ್ಮಾಣ”

# ಮಾಧ್ಯಮಗಳ ಗಮನ ಸೆಳೆದ ನಮ್ಮ ಸೇವಾ ಕಾರ್ಯ



ಔರಾದ್ ತಾಲೂಕಿನ ಕೊಳ್ಳುರ ಸರ್ಕಾರಿ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಫಾದರ್ ಯಾನ್ಸಿ, ಸುಧಾಕರ ಕೊಳ್ಳುರ, ಮುಖ್ಯಗುರು ಶಾಂತಕುಮಾರ, ಚಿನ್ನುಸಾಬ್ ಇದ್ದರು.

## ಪರಿಸರ ಸಂರಕ್ಷಣೆ ಎಲ್ಲರ ಹೊಣೆ

ಔರಾದ್: ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ ಮತ್ತು ಪರಿಸರ ಉಳಿವಿಗಾಗಿ ಎಲ್ಲರೂ ಶ್ರಮಿಸಬೇಕು ಎಂದು ಆರ್ಬಿಟ್ ಸಂಸ್ಥೆಯ ಫಾದರ್ ಯಾನ್ಸಿ ಹೇಳಿದರು. ತಾಲೂಕಿನ ಕೊಳ್ಳುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯಿಂದ ಆಯೋಜಿಸಿದ್ದ ವನಮಹೋತ್ಸವ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪರಿಸರ ಇಲ್ಲದೆ ಉಸಿರಾಡಲು, ಬದುಕಲು ಆಗುವುದಿಲ್ಲ. ಪ್ರತಿಯೊಬ್ಬರೂ ಸಸಿಗಳನ್ನು ನೆಟ್ಟು ಅವುಗಳ ಪೋಷಣೆ ಮಾಡಿ ಪರಿಸರ ಜಾಗೃತಿಗೆ ಕೈಜೋಡಿಸಬೇಕು ಎಂದರು. ಗ್ರಾಮದ ಯುವ ಮುಖಂಡ ಸುಧಾಕರ ಕೊಳ್ಳುರ ಮಾತನಾಡಿದರು. ಪ್ರೌಢ ಶಾಲೆ ಮುಖ್ಯಗುರು ಶಾಂತಕುಮಾರ ಅಧ್ಯಕ್ಷತೆ ವಹಿಸಿದ್ದರು. ಗ್ರಾಮದ ಮುಖಂಡರಾದ ಚಿನ್ನುಸಾಬ್ ಇತರರಿದ್ದರು. ಯೋಹಾನ ವಂದಿಸಿದರು. ಸುನೀಲ ನಿರೂಪಣೆ ಮಾಡಿದರು.

ವೇಮನ ನುಡಿ | ಕನ್ನಡ ದಿನಪತ್ರಿಕೆ | 27 ಜುಲೈ 2026

## ಆರ್ಬಿಟ್ ಸಂಸ್ಥೆಯ ನೇತೃತ್ವದಲ್ಲಿ ಕ್ಯಾನ್ಸರ್ ಬಗ್ಗೆ ಜನಜಾಗೃತಿ ಕಾರ್ಯಕ್ರಮ




ಹುಮ್ನಾಬಾದ್ ತಾಲೂಕಿನ ಸರ್ಕಾರಿ ಪದವಿ ಪೂರ್ವ ಕಾಲೇಜ್ ಮತ್ತು ಪ್ರೌಢಶಾಲೆಯ ಮಕ್ಕಳಿಗೆ, ಆರ್ಬಿಟ್ ಸಂಸ್ಥೆಯ ನೇತೃತ್ವದಲ್ಲಿ ಕ್ಯಾನ್ಸರ್ ಬಗ್ಗೆ ,ಜನಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ  ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಸ್ಪರ್ಶ ಕಾರ್ಯಕ್ರಮದ ಸಂಯೋಜಕರಾದ  ಯೆಹಾನ್  ಭಾಗವಹಿಸಿ ಕ್ಯಾನ್ಸರ್ ಬಗ್ಗೆ ಮಾಹಿತಿ ಅರಿವು ಮೂಡಿಸಿದರು.  ಕ್ಯಾನ್ಸರ್ ಕಾಯಿಲೆಯ ಲಕ್ಷಣಗಳು ಮತ್ತು ಕಾಯಿಲೆಗಳು ತಡೆಹಿಡಿಯುವ ಬಗ್ಗೆ ಒಟ್ಟು 136 ಜನ ಮಕ್ಕಳು ಕ್ಯಾನ್ಸರ್ ಬಗ್ಗೆ ತರಬೇತಿಯ ಪ್ಲಾಸ್ಟಿಕ್ ವಸ್ತುಗಳು ಉಪಯೋಗ ಮಾಡಬಾರದು. ಚರ್ಮರೋಗ ,ಗಂಟಲು ,ಹುಣ್ಣು ಬಾಯಲ್ಲಿ ಹುಣ್ಣು ಆಗಿದ್ದರೆ ಡಾಕ್ಟರ್ ಮೂಲಕ ತಪಾಸಣೆ ಮಾಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ಹಾಗೂ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತ ಶ್ರೀಮತಿ ಕವಿತಾ ರವರು ಮತ್ತು ನವಜೀವನ ಆರ್ಬಿಟ್ ಕಾರ್ಯಕ್ರಮದ ಶ್ರೀಮತಿ ಮಹಾದೇವಿ ಹಾಗೂ ಮಕ್ಕಳು ಇದ್ದರು.

ವಿಜಯ ಕರ್ನಾಟಕ | NAMMA BIDAR | 17 JUL 2026

## ಮಕ್ಕಳಲ್ಲಿ ಪರಿಸರ ಕಾಳಜಿ ಅಗತ್ಯ

■ **ವಿಕ ಸುದ್ದಿಲೋಕ** ಔರಾದ್

ಪರಿಸರ ಸಂರಕ್ಷಣೆ ಕುರಿತು ಮಕ್ಕಳಲ್ಲಿ ಅರಿವು ಬೆಳೆಸುವ ಉದ್ದೇಶದಿಂದ ಔರಾದ್ ತಾಲೂಕಿನ ಕೊಳ್ಳುರ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಇತ್ತೀಚಿಗೆ ಆರ್ಬಿಟ್ ಸಂಸ್ಥೆಯ ವತಿಯಿಂದ ವನಮಹೋತ್ಸವ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮ ಜರುಗಿತು.ಶಾಲಾ ಆವರಣದಲ್ಲಿ ವಿವಿಧ ಜಾತಿಯ ಸಸಿಗಳನ್ನು ನೆಡುವ ಮೂಲಕ ಹಸಿರು ಸಂರಕ್ಷಣೆ ಸಂಕಲ್ಪವನ್ನು ಬಿತ್ತಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಆರ್ಬಿಟ್ ಸಂಸ್ಥೆಯ ಫಾದರ್ ಯಾನ್ಸಿ, ಪ್ರಕೃತಿಯೇ ಜೀವಜಗತ್ತಿನ ಆಧಾರ. ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಿದೆ ಎಂದು ಹೇಳಿದರು. ಅರಣ್ಯ ನಾಶ, ಪರಿಸರ ಮಾಲಿನ್ಯ ಹಾಗೂ ಹವಾಮಾನ ವೈಪರೀತ್ಯದಂತಹ ಸವಾಲು ಎದುರಿಸಲು ಪ್ರತಿಯೊಬ್ಬರೂ ಮರಗಳನ್ನು ನೆಟ್ಟು ಅವುಗಳನ್ನು ಪೋಷಿಸುವ ಜವಾಬ್ದಾರಿ ಹೊತ್ತುಕೊಳ್ಳಬೇಕು. ಪರಿಸರ ಉಳಿದರೆ ಮಾತ್ರ ಬದುಕು ಉಳಿಯುತ್ತದೆ. ಆದ್ದರಿಂದ ಪರಿಸರ ಪ್ರೇಮವನ್ನು ಬಾಲ್ಯದಿಂದಲೇ ಮಕ್ಕಳಲ್ಲಿ ಬೆಳೆಸುವುದು ಅಗತ್ಯ ಎಂದರು. ಗ್ರಾಮದ ಯುವ ಮುಖಂಡ ಸುಧಾಕರ ಕೊಳ್ಳುರ ಮಾತನಾಡಿ, ನೆಲ, ಜಲ ಮತ್ತು ಕಾಡು ಉಳಿದರೆ ಮಾತ್ರ ನಾಡು ಉಳಿಯುತ್ತದೆ. ಪ್ರತಿಯೊಬ್ಬರೂ ಕನಿಷ್ಠ ಒಂದು ಸಸಿಯನ್ನು ನೆಟ್ಟು ಅದರ ಸಂರಕ್ಷಣೆಯ ಹೊಣೆ ಹೊತ್ತು ಮುಂದಿನ ಪೀಳಿಗೆಗೆ ಹಸಿರು ಪರಿಸರ ಉಳಿಸಿಕೊಡಬೇಕು ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸರಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಶಾಂತಕುಮಾರ ಮಾತನಾಡಿ, ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಯ ರಾಯಭಾರಿಗಳಾಗಬೇಕು. ಶಾಲೆಯಲ್ಲಿ ನೆಟ್ಟಿರುವ ಪ್ರತಿಯೊಂದು ಸಸಿಯನ್ನು ಮಕ್ಕಳೇ ಜವಾಬ್ದಾರಿಯಿಂದ ಬೆಳೆಸುವ ಮೂಲಕ ಪ್ರಕೃತಿ ಉಳಿವಿಗೆ ತಮ್ಮ ಕೊಡುಗೆ ನೀಡಬೇಕು ಎಂದರು. ಗ್ರಾಮದ ಮುಖಂಡ ಚಿನ್ನುಸಾಬ್, ಶಾಲೆಯ ಶಿಕ್ಷಕರು, ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸುನೀಲ ನಿರೂಪಿಸಿದರು. ಯೋಹಾನ ವಂದಿಸಿದರು.

# ಮಾಧ್ಯಮಗಳ ಗಮನ ಸೆಳೆದ ನಮ್ಮ ಸೇವಾ ಕಾರ್ಯ

ಮಾಣಿಕ್ಯದ ಮಿಂಚು
ಕನ್ನಡಿಗರ ಕನ್ನಡ ದಿನ ಪತ್ರಿಕೆ, ಬೀದರ
MANIKYADA MINCHU KANNADA DAILY NEWS PAPER, BIDAR
Cell : 9590581555 Email ID : manikyadaminchu@gmail.com
ಸಂಪಾದಕರು : ಮಾಣಿಕೇಶ ಪಾಟೀಲ Editor : Manikesh Patil Postal Reg. No. : BDR/101/2026-2028 -PRGI Reg. No : KNKAN/25/A 1139

## ಚಟ್ನಾಳದಲ್ಲಿ ವನಮಹೋತ್ಸವ ಕಾರ್ಯಕ್ರಮ



ಔರಾದ್ : ಪ್ರತಿಯೊಬ್ಬರು ಸಸಿಗಳನ್ನು ನೆಟ್ಟು, ಹಸಿರು ಹೊದಿಕೆ ಹೆಚ್ಚಿಸಿ ,ಪರಿಸರದ ಉಳಿವಿಗಾಗಿ ಕೈಜೋಡಿಸಬೇಕು ಎಂದು ಸಂತಪುರ ದೀಪಾಲಯ ಸಮಾಜ ಸೇವಾ ಸಂಸ್ಥೆ ನಿರ್ದೇಶಕಿ ಸಿಸ್ಟರ್ ಲಿನೆಟ್ ಹೇಳಿದರು.

ತಾಲೂಕಿನ ಚಟ್ನಾಳದಲ್ಲಿ ಮಂಗಳವಾರ ಸಂತಪುರ ದೀಪಾಲಯ ಮತ್ತು ಆರ್ಬಿಟ್ ಸಮಾಜ ಸೇವಾ ಸಂಸ್ಥೆ ಸಹಯೋಗದಲ್ಲಿ ಜರುಗಿದ ವನಮಹೋತ್ಸವ ಕಾರ್ಯಕ್ರಮದಲ್ಲಿ ಸಸಿಗಳನ್ನು ನೆಟ್ಟು ಮಾತನಾಡಿದ ಅವರು, ಪರಿಸರ ಸಂರಕ್ಷಣೆಯಲ್ಲಿ ಎಲ್ಲರ ಪಾತ್ರ ಮಹತ್ವದಾಗಿದೆ. ಎಲ್ಲರು ಗಿಡಗಳನ್ನು ನೆಟ್ಟು ಅವುಗಳನ್ನು ರಕ್ಷಿಸುವ ಸಂಕಲ್ಪ ಮಾಡಬೇಕು.

ಪರಿಸರರ ಕ್ಷಣೆ ಎಲ್ಲರ ಹೊಣೆಯಾಗಿದೆ ಎಂದರು. ಸಿಸ್ಟರ್ ಸೆಕುಂದಾ ಮಾತನಾಡಿ, ವನಮಹೋತ್ಸವ ಕೇವಲ ಒಂದು ದಿನಕ್ಕೆ ಮಾತ್ರ ಸಿಮಿತವಾಗದೇ ಪ್ರತಿಯೊಬರು ಗಿಡಗಳನ್ನು ನೆಡಲು ಮುಂದಾಗಬೇಕು. ಇದರಿಂದ ಪರಿಸರ ಸ್ವಚ್ಚವಾಗಿ ಬದುಕಲು ಉತ್ತಮ ಗಾಳಿ, ಮಳೆ, ಹಣ್ಣು, ನೆರಳುಸಿಗುತ್ತದೆ. ಪ್ರಕೃತಿ ಮುನಿದರೇ ಗಂಡಾಂತರ ತಪ್ಪಿದಲ್ಲ ಎಂದು ಎಚ್ಚರಿಸಿದರು.ಹಲವಾರು ಸಸಿಗಳನ್ನು ನೆಟ್ಟು, ಅವುಗಳನ್ನು ಪೋಷಿಸುವ ಸಂಕಲ್ಪ ಮಾಡಲಾಯಿತು. ಸುಂದರರಾಜ, ರುಬೇನ್, ನಿಕಿತಾ ಸೇರಿದಂತೆ ಮಕ್ಕಳಿದ್ದರು.

July 15, 2026 | Page No: 4 | manikyadaminchu.com
Powered By KHUSHIHOST ® | License - ePaperCloud.com

## ಗಿಡ ನೆಟ್ಟು ಪರಿಸರ ಉಳಿಸಿ: ಸಿಸ್ಟರ್ ಲಿನೆಟ್ ಕರೆ



**ಔರಾದ್, ಜು. 14:**

ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡ ನೆಟ್ಟು ಅದನ್ನು ಪೋಷಿಸುವ ಮೂಲಕ ಹಸಿರು ಹೊದಿಕೆಯನ್ನು ಹೆಚ್ಚಿಸಿ, ಪರಿಸರ ಸಂರಕ್ಷಣೆಗೆ ಕೈಜೋಡಿಸಬೇಕು ಎಂದು ಸಂತಪುರ ದೀಪಾಲಯ ಸಮಾಜ ಸೇವಾ ಸಂಸ್ಥೆಯ ನಿರ್ದೇಶಕಿ ಸಿಸ್ಟರ್ ಲಿನೆಟ್ ಕರೆ ನೀಡಿದರು.

ತಾಲೂಕಿನ ಚಟ್ನಾಳ ಗ್ರಾಮದಲ್ಲಿ ಮಂಗಳವಾರ ಸಂತಪುರ ದೀಪಾಲಯ ಹಾಗೂ ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ವನಮಹೋತ್ಸವ ಕಾರ್ಯಕ್ರಮದಲ್ಲಿ ಸಸಿಗಳನ್ನು ನೆಟ್ಟು ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಗಿಡಗಳನ್ನು ನೆಡುವುದಷ್ಟೇ ಅಲ್ಲ, ಅವುಗಳನ್ನು ಪೋಷಿಸಿ ಬೆಳೆಸುವ ಸಂಕಲ್ಪ ಮಾಡಬೇಕು ಎಂದು ತಿಳಿಸಿದರು.

ಸಿಸ್ಟರ್ ಸೆಕುಂದಾ ಮಾತನಾಡಿ, ವನಮಹೋತ್ಸವವು ಒಂದು ದಿನದ ಕಾರ್ಯಕ್ರಮವಾಗಿ ಉಳಿಯಬಾರದು. ಪ್ರತಿಯೊಬ್ಬರೂ ನಿರಂತರವಾಗಿ ಗಿಡಗಳನ್ನು ನೆಟ್ಟು ಬೆಳೆಸುವ ಅಭ್ಯಾಸ ರೂಢಿಸಿಕೊಳ್ಳಬೇಕು. ಹಸಿರು ಪರಿಸರದಿಂದ ಶುದ್ಧ ಗಾಳಿ, ಸಮರ್ಪಕ ಮಳೆ, ಹಣ್ಣು, ನೆರಳು ಸೇರಿದಂತೆ ಅನೇಕ ಪ್ರಯೋಜನಗಳು ದೊರೆಯುತ್ತವೆ. ಪ್ರಕೃತಿಯ ಸಮತೋಲನ ಕಾಪಾಡುವುದು ಎಲ್ಲರ ಕರ್ತವ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಲವಾರು ಸಸಿಗಳನ್ನು ನೆಟ್ಟು ಅವುಗಳನ್ನು ಸಂರಕ್ಷಿಸುವ ಸಂಕಲ್ಪ ಮಾಡಲಾಯಿತು. ಈ ಸಂದರ್ಭದಲ್ಲಿ ಸುಂದರರಾಜ, ರುಬೇನ್, ನಿಕಿತಾ ಹಾಗೂ ಮಕ್ಕಳು ಉಪಸ್ಥಿತರಿದ್ದರು.

ಉದಯಕಾಲ
ಕನ್ನಡಿಗರ ಜೀವಾಳ

## ಚುಟುಕು ಸುದ್ದಿ

## ವನಮಹೋತ್ಸವಕ್ಕೆ ಚಾಲನೆ



**ಉದಯಕಾಲ ನ್ಯೂಸ್**

**ಔರಾದ್:** ತಾಲೂಕಿನ ಚಟ್ನಾಳದಲ್ಲಿ ಮಂಗಳವಾರ ಸಂತಪುರ ದೀಪಾಲಯ ಮತ್ತು ಆರ್ಬಿಟ್ ಸಮಾಜ ಸೇವಾ ಸಂಸ್ಥೆ ಸಹಯೋಗದಲ್ಲಿ ವನಮಹೋತ್ಸವ ಕಾರ್ಯಕ್ರಮ ಜರುಗಿತು

ಪ್ರತಿಯೊಬ್ಬರು ಸಸಿಗಳನ್ನು ನೆಟ್ಟು, ಹಸಿರು ಹೊದಿಕೆ ಹೆಚ್ಚಿಸಿ ,ಪರಿಸರದ ಉಳಿವಿಗಾಗಿ ಕೈಜೋಡಿಸಬೇಕು ಎಂದು ಸಂತಪುರ ದೀಪಾಲಯ ಸಮಾಜ ಸೇವಾ ಸಂಸ್ಥೆ ನಿರ್ದೇಶಕಿ ಸಿಸ್ಟರ್ ಲಿನೆಟ್ ಹೇಳಿದರು. ತಾಲೂಕಿನ ಚಟ್ನಾಳದಲ್ಲಿ ಮಂಗಳವಾರ ಸಂತಪುರ ದೀಪಾಲಯ ಮತ್ತು ಆರ್ಬಿಟ್ ಸಮಾಜ ಸೇವಾ ಸಂಸ್ಥೆ ಸಹಯೋಗದಲ್ಲಿ ಜರುಗಿದ ವನಮಹೋತ್ಸವ ಕಾರ್ಯಕ್ರಮದಲ್ಲಿ ಸಸಿಗಳನ್ನು ನೆಟ್ಟು ಮಾತನಾಡಿದ ಅವರು, ಪರಿಸರ ಸಂರಕ್ಷಣೆಯಲ್ಲಿ ಎಲ್ಲರ ಪಾತ್ರ ಮಹತ್ವದ್ದಾಗಿದೆ. ಎಲ್ಲರು ಗಿಡಗಳನ್ನು ನೆಟ್ಟು ಅವುಗಳನ್ನು ರಕ್ಷಿಸುವ ಸಂಕಲ್ಪ ಮಾಡಬೇಕು. ಪರಿಸರ ರಕ್ಷಣೆ ಎಲ್ಲರ ಹೊಣೆಯಾಗಿದೆ ಎಂದರು.

ಸಿಸ್ಟರ್ ಸೆಕುಂದಾ ಮಾತನಾಡಿ, ವನಮಹೋತ್ಸವ ಕೇವಲ ಒಂದು ದಿನಕ್ಕೆ ಮಾತ್ರ ಸಿಮೀತವಾಗದೇ ಪ್ರತಿಯೊಬ್ಬರು ಗಿಡಗಳನ್ನು ನೆಡಲು ಮುಂದಾಗಬೇಕು. ಇದರಿಂದ ಪರಿಸರ ಸ್ವಚ್ಚವಾಗಿ ಬದುಕಲು ಉತ್ತಮ ಗಾಳಿ, ಮಳೆ, ಹಣ್ಣು, ನೆರಳು ಸಿಗುತ್ತದೆ. ಪ್ರಕೃತಿ ಮುನಿದರೇ ಗಂಡಾಂತರ ತಪ್ಪಿದಲ್ಲ ಎಂದು ಎಚ್ಚರಿಸಿದರು.

ಹಲವಾರು ಸಸಿಗಳನ್ನು ನೆಟ್ಟು, ಅವುಗಳನ್ನು ಪೋಷಿಸುವ ಸಂಕಲ್ಪ ಮಾಡಲಾಯಿತು. ಸುಂದರರಾಜ, ರುಬೇನ್, ನಿಕಿತಾ ಸೇರಿದಂತೆ ಮಕ್ಕಳಿದ್ದರು.

Kalaburgi Edition
Jul 16, 2026 Page No. 8
Powered by: erelego.com

# ಮಾಧ್ಯಮಗಳ ಗಮನ ಸೆಳೆದ ನಮ್ಮ ಸೇವಾ ಕಾರ್ಯ

## ಕೊಳ್ಳುರ ಪ್ರೌಢಶಾಲೇಲಿ ಪರಿಸರ ಕುರಿತ ಜಾಗೃತಿ



ಔರಾದ್: ತಾಲೂಕಿನ ಕೊಳ್ಳುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯಿಂದ ವನಮಹೋತ್ಸವ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮ ಆಯೋಜಿಸಿ ಶಾಲಾ ಆವರಣದಲ್ಲಿ ಸಸಿ ನೆಡುವ ಮೂಲಕ ಮಕ್ಕಳಲ್ಲಿ ಪರಿಸರ ಜಾಗೃತಿ ಮೂಡಿಸಲಾ ಯಿತು. ಆರ್ಬಿಟ್ ಸಂಸ್ಥೆಯ ಫಾದರ್ ಯಾನ್ಸಿ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ ಮತ್ತು ಪರಿಸರ ಉಳಿವಿ ಗಾಗಿ ಎಲ್ಲರೂ ಶ್ರಮಿಸಬೇಕು, ಪರಿಸರ ಇಲ್ಲದೆ ಏನೂ ಇಲ್ಲ ಉಸಿರಾಡಲು ಬದುಕಲು ಆಗುವುದಿಲ್ಲ ಪರಿಸರ ಜಾಗೃತಿ ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ತಿಳಿಸಿದರು. ಗ್ರಾಮದ ಯುವ ಮುಖಂಡರಾದ ಸುಧಾಕರ ಕೊಳ್ಳುರ ಮಾತನಾಡಿ ನೆಲ ಜಲ, ಕಾಡು ಉಳಿದರೆ ನಾಡು ಉಳಿಯುತದ ನಾವು ಉಳಿ ಯುತ್ತೇವೆ, ಪ್ರತಿಯೊಬ್ಬರು ಪ್ರತಿಜ್ಞೆ ಮಾಡಿ ಮರಗಳ ಸಂರಕ್ಷಣೆ ಮತ್ತು ಮರಗಳ ನೆಟ್ಟು ಬೆಳೆಸುವ ಜವಾಬ್ದಾರಿ ವಹಿಸಬೇಕು ಎಂದು ತಿಳಿಸಿದರು. ಪ್ರೌಢಶಾಲೆ ಮುಖ್ಯ ಗುರು ಗಳಾದ ಶಾಂತ ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು, ಗ್ರಾಮದ ಮುಖಂಡರಾದ ಚಿನ್ನುಸಾಬ್, ಸುನೀಲ, ಯೋಹಾನ, ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಆರ್ಬಿಟ್ ಸಂಸ್ಥೆಯಿಂದ ಗಾದಗಿ, ಹಿಪ್ಪಳಗಾಂವ್ ಗ್ರಾಮಗಳಲ್ಲಿ ವನಮಹೋತ್ಸವ ಕಾರ್ಯಕ್ರಮ





ಬೀದರ : ತಾಲ್ಲೂಕಿನ ಗಾದಗಿ ಗ್ರಾಮದ ಮದರ ತೇರೆಸಾ ಪ್ರೌಢ ಶಾಲೆ ಹಾಗೂ ಹಿಪ್ಪಳಗಾಂವ್ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿ ಆರ್ಬಿಟ್ ಸಂಸ್ಥೆ ಹುಮನಾಬಾದ ವತಿಯಿಂದ ವನಮಹೋತ್ಸವ ಕಾರ್ಯಕ್ರಮವನ್ನು ಸೋಮವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸಸಿನೆಡುವ ಮೂಲಕ ಕಾರ್ಯಕ್ರಮ ಚಾಲನೆನೀಡಿ ಮಾತನಾಡಿದ ಆರ್ಬಿಟ್ ಸಂಸ್ಥೆಯ ಸಮುದಾಯ ಕಾರ್ಯಕರ್ತರಾದ ನೋಹಾನ್ ಕಂದಗುಳಕರ ಅವರು ವೃಕ್ಷಗಳು ಪರಿಸರ ಸಮತೋಲನ ಕಾಪಾಡುವುದರ ಜೊತೆಗೆ ಶುದ್ಧ ಗಾಳಿ, ನೆರಳು ಹಾಗೂ ಜೀವಿಗಳಿಗೆ ಆಶ್ರಯ ಒದಗಿಸುತ್ತವೆ. ನಾವು ಅರೋಗ್ಯಕರ ಜೀವನ ಸಾಗಿಸಬೇಕಾದರೆ ನಮಗೆ ಶುದ್ಧವಾದ ಗಾಳಿ ಅತ್ಯವಶ್ಯಕ. ಆದ್ದರಿಂದ ಪ್ರತಿಯೊಬ್ಬರು ಒಂದು ಗಿಡಗಳನ್ನು ನೆಟ್ಟು ಅದರ ಪೋಷಣೆ ಮಾಡಬೇಕು.

ನಾವು ಒಂದು ದಿವಸ ಆಹಾರ ಮತ್ತು ನೀರು ಇಲ್ಲದೆ ಬದುಕಬಹುದು ಆದ–ರೆ ಗಾಳಿ ಇಲ್ಲದೇ ಮನುಷ್ಯ ಹಾಗೂ ಪ್ರಾಣಿ ಬದುಕಲು ಸಾಧ್ಯವಿಲ್ಲ, ನಾವು ಗಿಡಮರಗಳನ್ನು ಪೋಷಿಸುವ ಮೂಲಕ ಕಾಡು ಬೆಳಸಿ ನಾಡು ಉಳಿಸಿ ತತ್ವದಡಿ ಕೆಲಸ ಮಾಡಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಜಾತಿಯ ಸಸಿಗಳನ್ನು ನೆಟ್ಟು, ಹಸಿರು ಪರಿಸರ ನಿರ್ಮಾಣ ಹಾಗೂ ಮುಂದಿನ ಪೀಳಿಗೆಗೆ ಉತ್ತಮ ಪ್ರಕೃತಿಯನ್ನು ಉಳಿಸುವ ಉದ್ದೇಶದಿಂದ ಎಲ್ಲರೂ ಪರಿಸರ ಸಂರಕ್ಷಣೆಗೆ ಕೈಜೋಡಿಸುವಂತೆ ಮನವಿ ಮಾಡಲಾಯಿತು. ಕಾರ್ಯಕ್ರಮದಲ್ಲಿ ಹಿಪ್ಪಳಗಾಂವ್ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ದೇವಿದಾಸ ಎಸ್ಕೊನೋರ್ ಶಿಕ್ಷಕಿ ಸುಹಾಸಿನಿ ಹಾಗೂ ಗಾದಗಿ ಗ್ರಾಮದ ಮದರ ತೇರೆಸಾ ಪ್ರೌಢ ಶಾಲೆಯ ಮುಖ್ಯಗುರುಗಳಾದ ಶೀಬಾರಾಣಿ, ಶಿಕ್ಷಕರಾದ ರಾಕೇಶ್, ವಿಕ್ಟೋರಿಯಾ, ಆರ್ಬಿಟ್ ಸಂಸ್ಥೆಯ ಸಮುದಾಯ ಕಾರ್ಯಕರ್ತರಾದ ಅರುಣ್ ಮುಂಗನಾಳೆ, ಶಾಲಾ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಗಿಡಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಯ ಮಹತ್ವವನ್ನು ಸಾರಿದರು.

# ORBIT *Social Media*

*Follow Us*

Orbit Bidar

orbit humnabad

Orbit Bidar

orbit bidar

orbithumnabad

We actively use social media platforms to create awareness, educate communities, and engage with the public on important social issues. Through informative posts, campaigns, live sessions, polls, and online discussions, we encourage community participation and meaningful conversations. Our content focuses on child rights, women's empowerment, mental health, youth development, digital safety, climate action, sustainable living, health, education, and other social development initiatives.

WWW.ORBITBIDAR.IN

ಸೇವಾ ಸಂಗಮ ಸಂಸ್ಥೆ,
ಕಲಬುರಗಿ

# ಸೇವಾವಾಣಿ

## ಮಾಸಿಕ ಸುದ್ದಿಪತ್ರಿಕೆ - ಜುಲೈ 2026

**ಪ್ರಕಟಣೆ: ಆಗಸ್ಟ್ ತಿಂಗಳು**













www.sevasangama.in

# About



# SevaSangama

*Development Society, Kalaburagi*

## Vision

A Society based on Equality, Justice, Peace, Common Good and Eological Harmony.

## Mission

Upholding the dignity and rights of the most marginalized communities and engaging with development actors, the DSS works of knowledge Exchange, Capacity enhancement and collaborative social action, to achieve common good and sustainable Development.

## Objectives

- To integrally develop the poor, the marginalized and the disadvantaged.
- To capacitate the community ( mainly women ) through training and exposure.
- To promote community based organizations to become partners of change in development.
- To empower marginalized children through integrated education in order to uphold their right to education and stop child labour.
- To revive the traditional sustainable agriculture practices those enhance the natural resources among the rural, agricultural farming community.

## ಉಚಿತ ಕ್ಯಾನ್ಸರ್ ತಪಾಸಣಾ ಹಾಗೂ ಆರೋಗ್ಯ ತಪಾಸಣಾ ಶಿಬಿರ





18 ಜುಲೈ 2026ರಂದು ಸೇವಾ ಸಂಗಮ ಡೆವಲಪ್‌ಮೆಂಟ್ ಸೊಸೈಟಿ, ಇಂಡಿಯನ್ ಕ್ಯಾನ್ಸರ್ ಸೊಸೈಟಿ ಹಾಗೂ ಡಾನ್ ಬಾಸ್ಕೋ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಸಣ್ಣೂರ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ಕ್ಯಾನ್ಸರ್ ಹಾಗೂ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಯಿತು. ಗ್ರಾಮೀಣ ಜನರಲ್ಲಿ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವುದು ಮತ್ತು ಆರಂಭಿಕ ಹಂತದಲ್ಲಿಯೇ ರೋಗ ಪತ್ತೆಹಚ್ಚುವುದು ಶಿಬಿರದ ಮುಖ್ಯ ಉದ್ದೇಶವಾಗಿತ್ತು. ತಜ್ಞ ವೈದ್ಯರು ಆರೋಗ್ಯ ಹಾಗೂ ಕ್ಯಾನ್ಸರ್ ಕುರಿತು ಅಗತ್ಯ ಮಾಹಿತಿ ಮತ್ತು ಸಲಹೆ ನೀಡಿದರು. ಶಿಬಿರದಲ್ಲಿ 124 ಮಂದಿ ಭಾಗವಹಿಸಿ ಉಚಿತ ತಪಾಸಣೆಯ ಸೌಲಭ್ಯ ಪಡೆದರು. ಅಗತ್ಯವಿರುವವರಿಗೆ ಮುಂದಿನ ಚಿಕಿತ್ಸೆಗೆ ಸೂಕ್ತ ವೈದ್ಯಕೀಯ ಮಾರ್ಗದರ್ಶನ ನೀಡಲಾಯಿತು.



15 ಜುಲೈ 2026ರಂದು ಕಲಬುರಗಿ ಜಿಲ್ಲೆಯ ಫರಹತಾಬಾದ್ ಗ್ರಾಮದಲ್ಲಿ, ಸೇವಾ ಸಂಗಮ ಸಂಸ್ಥೆಯ ಮಹಿಳಾ ಸಬಲೀಕರಣ ಕಾರ್ಯಕ್ರಮದ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರ ಸಂರಕ್ಷಣೆಯ ಕುರಿತು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯೋಜಕರಾದ ಶ್ರೀಮತಿ ಇಂದು ಅವರು ಪರಿಸರದ ಮಹತ್ವ ಹಾಗೂ ಮರಗಳ ಸಂರಕ್ಷಣೆಯ ಅಗತ್ಯವನ್ನು ತಿಳಿಸಿದರು. ಪ್ರತಿಯೊಬ್ಬರೂ ತಮ್ಮ ಮನೆ ಅಥವಾ ಸುತ್ತಮುತ್ತಲಿನ ಪ್ರದೇಶದಲ್ಲಿ ಸಸಿ ನೆಟ್ಟು, ಅದನ್ನು ಕಾಳಜಿಯಿಂದ ಬೆಳೆಸುವಂತೆ ಕರೆ ನೀಡಲಾಯಿತು. ಕಾರ್ಯಕ್ರಮದ ಅಂಗವಾಗಿ 10 ಸಸಿಗಳನ್ನು ವಿತರಿಸಲಾಯಿತು. ಒಟ್ಟು 10 ಸದಸ್ಯರು ಭಾಗವಹಿಸಿ ಪರಿಸರ ಸಂರಕ್ಷಣೆಯ ಕುರಿತು ಅರಿವು ಪಡೆದರು.

## "ಮಕ್ಕಳ ಮನೆ" ಕಾರ್ಯಕ್ರಮ



ಮಕ್ಕಳಮನೆ ಕ್ರಶ್ ಕಾರ್ಯಕ್ರಮದಡಿ, ಕೇಂದ್ರದಲ್ಲಿ ನೋಂದಣಿಯಾಗಿರುವ ಮಕ್ಕಳ ಆರೋಗ್ಯ ಮತ್ತು ದೈಹಿಕ ಬೆಳವಣಿಗೆಯನ್ನು ಗಮನಿಸುವ ಉದ್ದೇಶದಿಂದ ಪ್ರತಿತಿಂಗಳು ಮಕ್ಕಳ ತೂಕ ಹಾಗೂ ಎತ್ತರವನ್ನು ದಾಖಲಿಸಲಾಗುತ್ತಿದೆ. ಮಕ್ಕಳ ಬೆಳವಣಿಗೆಯಲ್ಲಿ ನಿರೀಕ್ಷಿತ ಪ್ರಗತಿ ಕಾಣದಿದ್ದಲ್ಲಿ, ಅವರಿಗೆ ವಿಶೇಷ ಕಾಳಜಿ ವಹಿಸಿ ಪೌಷ್ಟಿಕ ಆಹಾರ, ಆರೋಗ್ಯಕರ ಅಭ್ಯಾಸಗಳು ಹಾಗೂ ಅಗತ್ಯ ಸಲಹೆಗಳನ್ನು ನೀಡಲಾಗುತ್ತದೆ. ಅಪೌಷ್ಟಿಕತೆಯ ಲಕ್ಷಣಗಳು ಕಂಡುಬಂದಲ್ಲಿ ಪೋಷಕರು ಹಾಗೂ ಆರೋಗ್ಯ ಕಾರ್ಯಕರ್ತರಿಗೆ ಮಾಹಿತಿ ನೀಡಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ. ಈ ನಿರಂತರ ಮೇಲ್ವಿಚಾರಣೆಯ ಮೂಲಕ ಮಕ್ಕಳ ಆರೋಗ್ಯ, ಪೌಷ್ಟಿಕತೆ ಮತ್ತು ದೈಹಿಕ ಬೆಳವಣಿಗೆಯನ್ನು ಸುಧಾರಿಸಲು ಮಕ್ಕಳಮನೆ ಕಾರ್ಯಕ್ರಮವು ಮಹತ್ವದ ಪಾತ್ರ ವಹಿಸುತ್ತಿದೆ.

**“ಆರೋಗ್ಯಕರ ಬೆಳವಣಿಗೆ – ಮಕ್ಕಳ ಉತ್ತಮ ಭವಿಷ್ಯ”**

## "ಮಕ್ಕಳ ಮನೆ" ಕಾರ್ಯಕ್ರಮ




06 ಜುಲೈ 2026ರಂದು ಆಲೂರು ಗ್ರಾಮದಲ್ಲಿ, ಮಕ್ಕಳ ಮನೆ (ಕ್ರಶ್) ಕಾರ್ಯಕ್ರಮದಡಿ ನೋಂದಣಿಯಾಗಿರುವ ಮಕ್ಕಳ ತಾಯಂದಿರ ಸಭೆ ಆಯೋಜಿಸಲಾಯಿತು. ಸಭೆಯಲ್ಲಿ ಮಕ್ಕಳ ಸಮಗ್ರ ಬೆಳವಣಿಗೆ, ನಿಯಮಿತ ಹಾಜರಾತಿ, ಪೌಷ್ಟಿಕ ಆಹಾರ, ಆರೋಗ್ಯ ಹಾಗೂ ಪೋಷಕರ ಜವಾಬ್ದಾರಿಗಳ ಕುರಿತು ಮಾಹಿತಿ ನೀಡಲಾಯಿತು. ಮಕ್ಕಳ ದೈಹಿಕ, ಮಾನಸಿಕ, ಬೌದ್ಧಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ಕೇಂದ್ರದ ಆಟ–ಪಾಠ ಚಟುವಟಿಕೆಗಳು ಸಹಕಾರಿಯಾಗುತ್ತವೆ ಎಂದು ತಿಳಿಸಲಾಯಿತು. ಮಕ್ಕಳ ಆರೋಗ್ಯದಲ್ಲಿ ಯಾವುದೇ ಬದಲಾವಣೆ ಕಂಡುಬಂದರೆ ತಕ್ಷಣ ಆರೈಕೆದಾರರಿಗೆ ಮಾಹಿತಿ ನೀಡುವಂತೆ ಹಾಗೂ ಮಕ್ಕಳನ್ನು ನಿಯಮಿತವಾಗಿ ಕೇಂದ್ರಕ್ಕೆ ಕಳುಹಿಸುವಂತೆ ಪೋಷಕರಿಗೆ ಮನವಿ ಮಾಡಲಾಯಿತು. ಸಭೆಯಲ್ಲಿ 10 ತಾಯಂದಿರು ಭಾಗವಹಿಸಿ ತಮ್ಮ ಅಭಿಪ್ರಾಯ ಹಾಗೂ ಸಲಹೆಗಳನ್ನು ಹಂಚಿಕೊಂಡರು. ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಕೇಂದ್ರದ ಚಟುವಟಿಕೆಗಳಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ಪೋಷಕರು ಭರವಸೆ ನೀಡಿದರು.





13 ಜುಲೈ 2026ರಂದು ಯಡ್ರಾಮಿ ತಾಲೂಕಿನ ಯಲಗೋಡ ಗ್ರಾಮದಲ್ಲಿ ಮಕ್ಕಳ ಮನೆ (ಕ್ರಶ್) ಕೇಂದ್ರ ಸಂಖ್ಯೆ–2 ಅನ್ನು ಬೆಳಿಗ್ಗೆ 11 ಗಂಟೆಗೆ ಉದ್ಘಾಟಿಸಲಾಯಿತು. ಅಜೀಮ್ ಪ್ರೇಮ್ಜಿ ಫೌಂಡೇಶನ್‌ನ ಮಕ್ಕಳ ಮನೆ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿ ಶ್ರೀ ಶರಣಕುಮಾರ್ ಸಲಗಾರ ಅವರು ಕಾರ್ಯಕ್ರಮದ ಉದ್ದೇಶ ಮತ್ತು ಮಹತ್ವವನ್ನು ವಿವರಿಸಿದರು. 6 ತಿಂಗಳಿಂದ 3 ವರ್ಷದೊಳಗಿನ ಮಕ್ಕಳಿಗೆ ಸುರಕ್ಷಿತ ಆರೈಕೆ, ಪೌಷ್ಟಿಕ ಆಹಾರ ಹಾಗೂ ಆಟ–ಪಾಠ ಆಧಾರಿತ ಚಟುವಟಿಕೆಗಳ ಮೂಲಕ ಸಮಗ್ರ ಬೆಳವಣಿಗೆಗೆ ಪೂರಕ ವಾತಾವರಣ ಕಲ್ಪಿಸುವುದು ಕೇಂದ್ರದ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು. ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಅವರು ಮಾತನಾಡಿ, “ಮಕ್ಕಳ ಮನೆ ಕೇಂದ್ರವು ಸಂಸ್ಥೆಯದ್ದಲ್ಲ; ಇದು ನಿಮ್ಮ ಮಕ್ಕಳ ಮನೆಯಾಗಿದೆ” ಎಂದು ತಿಳಿಸಿದರು. ಕೇಂದ್ರದಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ, ಆಟ ಹಾಗೂ ಕಲಿಕಾ ಚಟುವಟಿಕೆಗಳ ಮೂಲಕ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಸಹಕಾರ ನೀಡಲಾಗುವುದು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸುಮಾರು 30 ತಾಯಂದಿರು, ಮಕ್ಕಳು, ಗ್ರಾಮದ ಹಿರಿಯರು ಹಾಗೂ ಮುಖಂಡರು ಭಾಗವಹಿಸಿ ಕೇಂದ್ರದ ಉದ್ಘಾಟನೆಯನ್ನು ಯಶಸ್ವಿಗೊಳಿಸಿದರು.

## "ಮಕ್ಕಳ ಮನೆ" ಕಾರ್ಯಕ್ರಮ



ಮಕ್ಕಳ ಮನೆ ಕಾರ್ಯಕ್ರಮದ ಮುಂದುವರಿದ ಕಾರ್ಯಚಟುವಟಿಕೆಗಳ ಭಾಗವಾಗಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಯಿತು. ಸಭೆಯಲ್ಲಿ ಕಾರ್ಯಕ್ರಮದ ಉದ್ದೇಶ ಹಾಗೂ ಮಕ್ಕಳಿಗೆ ದೊರೆಯುವ ಪ್ರಯೋಜನಗಳ ಕುರಿತು ಮಾಹಿತಿ ನೀಡಲಾಯಿತು. ಗ್ರಾಮದಲ್ಲಿರುವ ಅರ್ಹ ಮಕ್ಕಳನ್ನು ಗುರುತಿಸಲು ಮಕ್ಕಳ ಸಮೀಕ್ಷೆ ನಡೆಸಲು ಅಗತ್ಯ ಅನುಮತಿ ಪಡೆಯಲಾಯಿತು. ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯಿತಿ, ಪೋಷಕರು, ಆರೋಗ್ಯ ಸಿಬ್ಬಂದಿ ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಸಹಕಾರದ ಕುರಿತು ಚರ್ಚಿಸಲಾಯಿತು.



31 ಜುಲೈ 2026ರಂದು ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್ ಸಹಯೋಗದಲ್ಲಿ ಯಡ್ರಾಮಿ ತಾಲೂಕಿನ ಹಂಗರಗಾ ಗ್ರಾಮದಲ್ಲಿ ಮಕ್ಕಳ ಮನೆ (ಕ್ರಶ್) ಕೇಂದ್ರ ಉದ್ಘಾಟಿಸಲಾಯಿತು. ಇದರೊಂದಿಗೆ ಯಡ್ರಾಮಿ ತಾಲೂಕಿನಲ್ಲಿ ಒಟ್ಟು 19 ಮಕ್ಕಳ ಮನೆ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಸಂಪನ್ಮೂಲ ವ್ಯಕ್ತಿ ಶ್ರೀ ಶರಣಕುಮಾರ್ ಸಲಗಾರ ಅವರು ಕೇಂದ್ರದ ಉದ್ದೇಶ ಹಾಗೂ ಮಹತ್ವವನ್ನು ವಿವರಿಸಿ, ಮಕ್ಕಳಿಗೆ ಪೌಷ್ಟಿಕ ಆಹಾರ, ಸುರಕ್ಷಿತ ಆರೈಕೆ ಹಾಗೂ ಆಟ-ಪಾಠ ಚಟುವಟಿಕೆಗಳ ಮೂಲಕ ಸಮಗ್ರ ಬೆಳವಣಿಗೆಗೆ ಪೂರಕ ವಾತಾವರಣ ಕಲ್ಪಿಸಲಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ 35ಕ್ಕೂ ಹೆಚ್ಚು ಗ್ರಾಮಸ್ಥರು, ಪೋಷಕರು ಹಾಗೂ ಗ್ರಾಮದ ಮುಖಂಡರು ಭಾಗವಹಿಸಿದರು. ಶ್ರೀ ಚಂದ್ರಕಾಂತ್ ಅವರು ಕೇಂದ್ರದ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು.





29 ಜುಲೈ 2026ರಂದು ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್ ಸಹಯೋಗದಲ್ಲಿ ಯಡ್ರಾಮಿ ತಾಲೂಕಿನ ಮಕ್ಕಳ ಮನೆ ಕೇಂದ್ರಗಳಿಗೆ ಕೇಂದ್ರ ತಂಡದ ಶ್ರೀ ಶಂಕರ್ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈಜೇರಿ ಗ್ರಾಮದ 1, 3, 4 ಮತ್ತು 5ನೇ ಕೇಂದ್ರಗಳು ಹಾಗೂ ಸಾತಖೇಡ ಕೇಂದ್ರಕ್ಕೆ ಭೇಟಿ ನೀಡಿ ಮಕ್ಕಳ ಆರೈಕೆ, ಸ್ವಚ್ಛತೆ, ನಿರ್ವಹಣೆ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಿ, ಆರೈಕೆದಾರರಿಗೆ ಅಗತ್ಯ ಸಲಹೆಗಳನ್ನು ನೀಡಿದರು. ನಂತರ ಜೇವರ್ಗಿಯ ಡಾನ್ ಬಾಸ್ಕೋ ಸಂಸ್ಥೆಯಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಶ್ರೀ ಅರುಣ್ ಕುಮಾರ್ ಅವರು PPT ಮೂಲಕ ಕಾರ್ಯಕ್ರಮದ ಪ್ರಗತಿ ಹಾಗೂ ಮುಂದಿನ ಕಾರ್ಯಯೋಜನೆಗಳನ್ನು ವಿವರಿಸಿದರು. ಸಭೆಯಲ್ಲಿ ಫಾದರ್ ವಿಕ್ಟರ್ ವಾಸ್, ಫಾದರ್ ಆಲ್ಬರ್ಟ್, ಗುರುರಾಜ್, ಶರಣ್, ರಂಗನಾಥ್ ಹಾಗೂ ಶ್ರೀ ಚಂದ್ರಕಾಂತ್ ಸೇರಿದಂತೆ ಸಿಬ್ಬಂದಿ ಉಪಸ್ಥಿತರಿದ್ದರು.

**“ಗುಣಮಟ್ಟದ ಆರೈಕೆಗೆ ನಿರಂತರ ಪರಿಶೀಲನೆ”**

# 04 ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ಮಕ್ಕಳ ಮನೆ" ಕಾರ್ಯಕ್ರಮ

27 ಜುಲೈ 2026ರಂದು ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್ ಸಹಯೋಗದಲ್ಲಿ ಯಡ್ರಾಮಿ ತಾಲೂಕಿನ ಕಾಸರಬೊಸಗಾ ಗ್ರಾಮದಲ್ಲಿ ಎರಡನೇ ಮಕ್ಕಳ ಮನೆ (ಕ್ರಶ್) ಕೇಂದ್ರ ಉದ್ಘಾಟಿಸಲಾಯಿತು. ಇದರೊಂದಿಗೆ ಯಡ್ರಾಮಿ ತಾಲೂಕಿನಲ್ಲಿ ಒಟ್ಟು 18 ಮಕ್ಕಳ ಮನೆ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ಆಲ್ಬರ್ಟ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಸಂಪನ್ಮೂಲ ವ್ಯಕ್ತಿ ಶ್ರೀ ಶರಣಕುಮಾರ್ ಅವರು ಮಕ್ಕಳ ಮನೆ ಕಾರ್ಯಕ್ರಮದ ಉದ್ದೇಶ ಹಾಗೂ ಮಕ್ಕಳಿಗೆ ಮತ್ತು ಪೋಷಕರಿಗೆ ದೊರೆಯುವ ಪ್ರಯೋಜನಗಳ ಕುರಿತು ಮಾಹಿತಿ ನೀಡಿದರು. ತಾಯಂದಿರು ತಮ್ಮ ಮಕ್ಕಳೊಂದಿಗೆ ರಿಬ್ಬನ್ ಕತ್ತರಿಸುವ ಮೂಲಕ ಕೇಂದ್ರವನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ 30 ತಾಯಂದಿರು ಹಾಗೂ ಮಕ್ಕಳು, ಗ್ರಾಮದ ಮುಖಂಡರಾದ ಶ್ರೀ ಮಹಬೂಬಾ ಮತ್ತು ಶ್ರೀ ರಫೀಕ್ ಭಾಗವಹಿಸಿದರು.







31 ಜುಲೈ 2026ರಂದು ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್ ಸಹಯೋಗದಲ್ಲಿ ಯಡ್ರಾಮಿ ತಾಲೂಕಿನ ಕರಕಿಹಳ್ಳಿ ಗ್ರಾಮದಲ್ಲಿ ಕ್ರಶ್ ಯೋಜನೆಯಡಿ ಮೊದಲನೇ ಸಮುದಾಯ ಸಭೆ ಆಯೋಜಿಸಲಾಯಿತು. ಸಂಪನ್ಮೂಲ ವ್ಯಕ್ತಿ ಶ್ರೀ ಶರಣಕುಮಾರ್ ಅವರು ಕ್ರಶ್ ಕೇಂದ್ರದ ಉದ್ದೇಶ ಹಾಗೂ 7 ತಿಂಗಳಿಂದ 3 ವರ್ಷದೊಳಗಿನ ಮಕ್ಕಳಿಗೆ ಪೌಷ್ಟಿಕ ಆಹಾರ, ಸುರಕ್ಷಿತ ಆರೈಕೆ ಮತ್ತು ಸಮಗ್ರ ಬೆಳವಣಿಗೆಗೆ ಪೂರಕ ವಾತಾವರಣ ಕಲ್ಪಿಸುವ ಕುರಿತು ಮಾಹಿತಿ ನೀಡಿದರು. ಗ್ರಾಮಸ್ಥರು ಸಕ್ರಿಯವಾಗಿ ಭಾಗವಹಿಸಿ ಕೇಂದ್ರದ ಅಗತ್ಯವನ್ನು ವ್ಯಕ್ತಪಡಿಸಿದರು. ಕೇಂದ್ರಕ್ಕಾಗಿ ಸೂಕ್ತ ಕಟ್ಟಡ ಒದಗಿಸುವುದಾಗಿ ಭರವಸೆ ನೀಡಿದ ಗ್ರಾಮಸ್ಥರು, 5 ಮಹಿಳೆಯರು ಆರೈಕೆದಾರರಾಗಿ ಕಾರ್ಯನಿರ್ವಹಿಸಲು ಹೆಸರು ನೋಂದಾಯಿಸಿಕೊಂಡರು. ಸಭೆಗೆ 35 ತಾಯಂದಿರು ಹಾಗೂ ಗ್ರಾಮದ ಮುಖಂಡರು ಭಾಗವಹಿಸಿದ್ದರು. ಕಾರ್ಯಕ್ರಮ ವ್ಯವಸ್ಥಾಪಕರಾದ ಶ್ರೀ ಅರುಣ್ ಕುಮಾರ್ ಅವರು ಅಧ್ಯಕ್ಷತೆ ವಹಿಸಿದ್ದರು.





23 ಜುಲೈ 2026ರಂದು ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್ ಸಹಯೋಗದಲ್ಲಿ ಮಕ್ಕಳ ಮನೆ (ಕ್ರಶ್) ಕಾರ್ಯಕ್ರಮದ ಆರೈಕೆದಾರರಿಗೆ ಮಾಸಿಕ ತರಬೇತಿ ಹಾಗೂ ಪರಿಶೀಲನಾ ಸಭೆ ಆಯೋಜಿಸಲಾಯಿತು. ಸಂಪನ್ಮೂಲ ವ್ಯಕ್ತಿ ಶ್ರೀ ಶರಣಕುಮಾರ್ ಸಲಗಾರ ಅವರು ಮಳೆಗಾಲದಲ್ಲಿ ಮಕ್ಕಳ ಆರೋಗ್ಯ ಕಾಪಾಡುವುದು, ಕೇಂದ್ರದ ಸ್ವಚ್ಛತೆ ಹಾಗೂ ತುರ್ತು ಸಂದರ್ಭಗಳಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಮಾಹಿತಿ ನೀಡಿದರು. ಪ್ರತಿಯೊಂದು ಕೇಂದ್ರದಲ್ಲೂ ಪೋಷಕರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಹಾಗೂ ಆರೋಗ್ಯ ಸಿಬ್ಬಂದಿಯ ಸಂಪರ್ಕ ಸಂಖ್ಯೆಗಳು ಲಭ್ಯವಿರುವಂತೆ ಸೂಚಿಸಲಾಯಿತು. ಮಕ್ಕಳ ಆರೋಗ್ಯದಲ್ಲಿ ಯಾವುದೇ ಬದಲಾವಣೆ ಕಂಡುಬಂದರೆ ತಕ್ಷಣ ಪೋಷಕರು ಹಾಗೂ ಆರೋಗ್ಯ ಸಿಬ್ಬಂದಿಗೆ ಮಾಹಿತಿ ನೀಡಿ ಅಗತ್ಯ ಚಿಕಿತ್ಸೆ ಒದಗಿಸುವಂತೆ ತಿಳಿಸಲಾಯಿತು. ಆರೈಕೆದಾರರಿಗೆ ಮಕ್ಕಳಿಗೆ ಗುಣಮಟ್ಟದ ಆರೈಕೆ ಮತ್ತು ಪರಿಣಾಮಕಾರಿ ಕಲಿಕಾ ಚಟುವಟಿಕೆಗಳನ್ನು ನೀಡುವ ಕುರಿತು ಮಾರ್ಗದರ್ಶನ ನೀಡಲಾಯಿತು. ತರಬೇತಿಯಲ್ಲಿ 35 ಆರೈಕೆದಾರರು, ಸಂಪನ್ಮೂಲ ವ್ಯಕ್ತಿ ಶ್ರೀ ರಂಗನಾಥ್, ಸಂಸ್ಥೆಯ ಸಿಬ್ಬಂದಿ ಹಾಗೂ ಸಹ ನಿರ್ದೇಶಕರಾದ ಫಾದರ್ ಆಲ್ಬರ್ಟ್ ಉಪಸ್ಥಿತರಿದ್ದರು. ಕೊನೆಯಲ್ಲಿ ಮೌಲ್ಯಮಾಪನ ನಡೆಸಿ ಕಾರ್ಯಕ್ರಮದ ಗುಣಮಟ್ಟ ಸುಧಾರಣೆಯ ಕುರಿತು ಚರ್ಚಿಸಲಾಯಿತು.

## "ಆರೈಕೆದಾರರಿಗೆ ಮಾಸಿಕ ತರಬೇತಿ ಹಾಗೂ ಪರಿಶೀಲನಾ ಸಭೆ"

# 05 ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ಮಕ್ಕಳ ಮನೆ" ಕಾರ್ಯಕ್ರಮ





ಮಕ್ಕಳ ಮನೆ ಕೇಂದ್ರದಲ್ಲಿ ಮಕ್ಕಳ ಸುರಕ್ಷತೆ ಹಾಗೂ ಮಳೆಗಾಲದ ಸಂದರ್ಭದಲ್ಲಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವ ಉದ್ದೇಶದಿಂದ ವಿವಿಧ ಕ್ರಮಗಳನ್ನು ಕೈಗೊಳ್ಳಲಾಯಿತು. ಮಕ್ಕಳ ಅನುಕೂಲಕ್ಕಾಗಿ ಶೌಚಾಲಯ ನಿರ್ಮಾಣ, ಪ್ರವೇಶ ಮಾರ್ಗ, ಕುಡಿಯುವ ನೀರು, ಸ್ವಚ್ಛತೆ ಹಾಗೂ ಕೇಂದ್ರದ ಸುತ್ತಮುತ್ತಲಿನ ಪರಿಸರವನ್ನು ಪರಿಶೀಲಿಸಿ ಅಗತ್ಯ ವ್ಯವಸ್ಥೆಗಳನ್ನು ಮಾಡಲಾಯಿತು. ಮಳೆಗಾಲದಲ್ಲಿ ಕೇಂದ್ರದ ಒಳಾಂಗಣ ಮತ್ತು ಹೊರಾಂಗಣದಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳುವುದು, ಸ್ವಚ್ಛತೆ ಕಾಪಾಡುವುದು ಹಾಗೂ ಮಕ್ಕಳ ಆರೋಗ್ಯ ಮತ್ತು ಸುರಕ್ಷತೆಗೆ ಆದ್ಯತೆ ನೀಡುವಂತೆ ಆರೈಕೆದಾರರಿಗೆ ಮಾರ್ಗದರ್ಶನ ನೀಡಲಾಯಿತು. ಈ ಕ್ರಮಗಳ ಮೂಲಕ ಮಕ್ಕಳಿಗೆ ಸುರಕ್ಷಿತ, ಸ್ವಚ್ಛ ಹಾಗೂ ಆರೋಗ್ಯಕರ ವಾತಾವರಣ ಒದಗಿಸಿ, ಅವರ ಆರೈಕೆ ಮತ್ತು ಸಮಗ್ರ ಬೆಳವಣಿಗೆಗೆ ಪೂರಕವಾದ ವ್ಯವಸ್ಥೆಯನ್ನು ಕಲ್ಪಿಸಲಾಯಿತು.

## "ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ"

### ಮಕ್ಕಳ ಸಮಗ್ರ ಬೆಳವಣಿಗೆಗೆ ಚಟುವಟಿಕೆ ಆಧಾರಿತ ತರಬೇತಿ



14 July 2026ರಂದು ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್ ಸಹಯೋಗದಲ್ಲಿ ಕಲಬುರಗಿ ನಗರದ ಚೇತನ ಕೇಂದ್ರದಲ್ಲಿ ಸಿಬ್ಬಂದಿ ವರ್ಗದವರಿಗೆ ಒಂದು ದಿನದ ಬಲವರ್ಧನೆ ತರಬೇತಿಯನ್ನು ಆಯೋಜಿಸಲಾಯಿತು. ಸಾಕ್ಷ್ಯ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಖಾಜಾ ಹುಸೇನ್ ಹಾಗೂ ಶ್ರೀ ಜನೀ ಫರ್ಮೆಡಾ ಅವರು ಬೆಳವಣಿಗೆಯಲ್ಲಿ ವಿಳಂಬ ಹೊಂದಿರುವ ಮಕ್ಕಳಿಗೆ ದೈಹಿಕ ಚಟುವಟಿಕೆಗಳು, ಏಕಾಗ್ರತೆ ಹೆಚ್ಚಿಸುವ ಚಟುವಟಿಕೆಗಳು ಹಾಗೂ ಭಾಷಾ ಬೆಳವಣಿಗೆಗೆ ಸಹಾಯಕವಾದ ವಿಧಾನಗಳ ಕುರಿತು ಪ್ರಾಯೋಗಿಕ ತರಬೇತಿ ನೀಡಿದರು. ಮಕ್ಕಳ ವಯಸ್ಸು ಮತ್ತು ಬೆಳವಣಿಗೆಯ ಹಂತಕ್ಕೆ ಅನುಗುಣವಾಗಿ ಸೂಕ್ತ ಚಟುವಟಿಕೆಗಳನ್ನು ಆಯ್ಕೆ ಮಾಡುವ ಕುರಿತು ಮಾರ್ಗದರ್ಶನ ನೀಡಲಾಯಿತು. ತರಬೇತಿಯಲ್ಲಿ ಒಟ್ಟು 9 ಮಂದಿ ಸಿಬ್ಬಂದಿ ಭಾಗವಹಿಸಿ, ಮಕ್ಕಳ ಬೆಳವಣಿಗೆಗೆ ಸಹಾಯಕವಾಗುವ ವಿವಿಧ ತರಬೇತಿ ವಿಧಾನಗಳನ್ನು ಕಲಿತುಕೊಂಡರು.



20 July 2026ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್ ಸಹಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದಡಿ ಉಮರ್ ಕಾಲೋನಿಯಲ್ಲಿ ಪಾಲಕರಿಗಾಗಿ ಮಾಹಿತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಯೋಜನೆಯ ಕಾರ್ಯಕರ್ತೆಯಾದ ಕುಮಾರಿ ಅನಿತಾ ಅವರು 0–8 ವರ್ಷದೊಳಗಿನ ಮಕ್ಕಳಲ್ಲಿ ಬೆಳವಣಿಗೆಯ ವಿಳಂಬವನ್ನು ಆರಂಭಿಕ ಹಂತದಲ್ಲಿಯೇ ಗುರುತಿಸುವ ವಿಧಾನಗಳು ಹಾಗೂ ಅಂಗವೈಕಲ್ಯದ ವಿವಿಧ ವಿಧಗಳ ಕುರಿತು ಮಾಹಿತಿ ನೀಡಿದರು. 2016ರ ಕಾಯ್ದೆಯಡಿ ಗುರುತಿಸಲಾದ 21 ವಿಧದ ಅಂಗವೈಕಲ್ಯಗಳ ಕುರಿತು ಅರಿವು ಮೂಡಿಸಿ, ಮಕ್ಕಳಲ್ಲಿ ಬೆಳವಣಿಗೆಯ ವಿಳಂಬದ ಲಕ್ಷಣಗಳು ಕಂಡುಬಂದಲ್ಲಿ ಸಮಯಕ್ಕೆ ಸರಿಯಾಗಿ ತಪಾಸಣೆ ಮತ್ತು ಅಗತ್ಯ ಸೇವೆಗಳನ್ನು ಪಡೆಯುವ ಮಹತ್ವವನ್ನು ತಿಳಿಸಲಾಯಿತು. ಕಾರ್ಯಕ್ರಮದಲ್ಲಿ ಒಟ್ಟು 11 ಮಂದಿ ಪಾಲಕರು ಭಾಗವಹಿಸಿ ಅಗತ್ಯ ಮಾಹಿತಿಯನ್ನು ಪಡೆದುಕೊಂಡರು.

**"ಬದುಕುಗಳನ್ನು ಸ್ಪರ್ಶಿಸಿ, ಸಮುದಾಯಗಳನ್ನು ಬಲಪಡಿಸುವ ಪಯಣ"**

# 06 ಸೇವಾ ಸಂಗಮ ಸಂಸ್ಥೆ, ಕಲಬುರಗಿ

## “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”



20 July 2026ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್ ಸಹಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದಡಿ ಉಮರ್ ಕಾಲೋನಿಯಲ್ಲಿ ಪಾಲಕರಿಗಾಗಿ ಮಾಹಿತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಯೋಜನೆಯ ಕಾರ್ಯಕರ್ತೆಯಾದ ಕುಮಾರಿ ಅನಿತಾ ಅವರು 0-8 ವರ್ಷದೊಳಗಿನ ಮಕ್ಕಳಲ್ಲಿ ಬೆಳವಣಿಗೆಯ ವಿಳಂಬವನ್ನು ಆರಂಭಿಕ ಹಂತದಲ್ಲಿಯೇ ಗುರುತಿಸುವ ವಿಧಾನಗಳು ಹಾಗೂ ಅಂಗವೈಕಲ್ಯದ ವಿವಿಧ ವಿಧಗಳ ಕುರಿತು ಮಾಹಿತಿ ನೀಡಿದರು. 2016ರ ಕಾಯ್ದೆಯಡಿ ಗುರುತಿಸಲಾದ 21 ವಿಧದ ಅಂಗವೈಕಲ್ಯಗಳ ಕುರಿತು ಅರಿವು ಮೂಡಿಸಿ, ಮಕ್ಕಳಲ್ಲಿ ಬೆಳವಣಿಗೆಯ ವಿಳಂಬದ ಲಕ್ಷಣಗಳು ಕಂಡುಬಂದಲ್ಲಿ ಸಮಯಕ್ಕೆ ಸರಿಯಾಗಿ ತಪಾಸಣೆ ಮತ್ತು ಅಗತ್ಯ ಸೇವೆಗಳನ್ನು ಪಡೆಯುವ ಮಹತ್ವವನ್ನು ತಿಳಿಸಲಾಯಿತು.

17 July 2026ರಂದು ಕಲಬುರಗಿ ನಗರದ ಚೇತನ ಕೇಂದ್ರದಲ್ಲಿ ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್ ಸಹಯೋಗದಲ್ಲಿ ಬೆಳವಣಿಗೆಯಲ್ಲಿ ವಿಳಂಬ ಹೊಂದಿರುವ ಮಕ್ಕಳಿಗೆ ದೈಹಿಕ ಮಾಪನವನ್ನು ನಡೆಸಲಾಯಿತು. ಸಾಕ್ಷ್ಯ ಸಂಸ್ಥೆಯ ಭೌತಿಕ ತಜ್ಞರಾದ ಶ್ರೀ ಖಾಜಾ ಹುಸೇನ್ ಅವರು ಮಕ್ಕಳ ದೈಹಿಕ ಬೆಳವಣಿಗೆಯನ್ನು ಪರಿಶೀಲಿಸಿ, ಅವರ ಅಗತ್ಯಕ್ಕೆ ಅನುಗುಣವಾದ ಸಾಧನ-ಸಲಕರಣೆಗಳ ಕುರಿತು ಮೌಲ್ಯಮಾಪನ ನಡೆಸಿದರು. ಈ ಸಂದರ್ಭದಲ್ಲಿ ಒಟ್ಟು 11 ಮಕ್ಕಳ ದೈಹಿಕ ಮಾಪನ ಮಾಡಲಾಯಿತು.





07 July 2026ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್ ಸಹಯೋಗದಲ್ಲಿ ಕಲಬುರಗಿ ತಾಲೂಕಿನ ಮೇಳಕುಂದಾ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಾಲ್ಯ ವಿವಾಹ ನಿಷೇಧ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಕುಮಾರಿ ಲಕ್ಷ್ಮಿ ಅವರು ಬಾಲ್ಯ ವಿವಾಹದ ಕಾನೂನುಬದ್ಧ ಪರಿಣಾಮಗಳು, ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲಿನ ದುಷ್ಪರಿಣಾಮಗಳು ಹಾಗೂ ಬಾಲ್ಯ ವಿವಾಹ ತಡೆಗಟ್ಟುವಲ್ಲಿ ವಿದ್ಯಾರ್ಥಿಗಳು ಮತ್ತು ಸಮುದಾಯದ ಪಾತ್ರದ ಕುರಿತು ಮಾಹಿತಿ ನೀಡಿದರು. ಬಾಲ್ಯ ವಿವಾಹದ ಪ್ರಕರಣಗಳು ಕಂಡುಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ನೀಡುವಂತೆ ವಿದ್ಯಾರ್ಥಿಗಳಿಗೆ ತಿಳಿಸಲಾಯಿತು.

## “ಸೇವೆಯ ಸ್ಪಂದನದಿಂದ ಸಮಾಜದ ಪರಿವರ್ತನೆಯವರೆಗೆ”

# “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”



16 July 2026ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್ ಸಹಯೋಗದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ ಕಲಬುರಗಿ ನಗರದ ಚೇತನ ಕೇಂದ್ರದಲ್ಲಿ ಪಾಲಕರ ಚಾಂಪಿಯನ್ಸ್ ಗುಂಪಿನ 3 ದಿನಗಳ ತರಬೇತಿ ಆಯೋಜಿಸಲಾಯಿತು. ಸಂಪನ್ಮೂಲ ವ್ಯಕ್ತಿ ಶ್ರೀ ಖಾಜಾ ಹುಸೇನ್ ಅವರು ಸೆರೆಬ್ರಲ್ ಪಾಲ್ಸಿ (CP)ಯ ವಿಧಗಳು ಹಾಗೂ CP ಹೊಂದಿರುವ ಮಕ್ಕಳಿಗೆ ಪಾಲಕರು ನೀಡಬಹುದಾದ ಸಹಾಯದ ಕುರಿತು ಮಾಹಿತಿ ನೀಡಿದರು. ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಮಕ್ಕಳ ದೈಹಿಕ ಮತ್ತು ಚಲನೆಯ ಬೆಳವಣಿಗೆಗೆ ಮನೆಯಲ್ಲಿ ನೀಡಬಹುದಾದ ಸಹಾಯದ ಕುರಿತು ಮಾರ್ಗದರ್ಶನ ನೀಡಲಾಯಿತು.



22 July 2026ರಂದು ಕಲಬುರಗಿ ತಾಲೂಕಿನ ತಿಲಗೋಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವಾ ಸಂಗಮ ಸಂಸ್ಥೆಯ ವತಿಯಿಂದ ಮಕ್ಕಳಿಗಾಗಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸಂಸ್ಥೆಯ ಕಾರ್ಯಕರ್ತರಾದ ಶ್ರೀ ರಾಜಕುಮಾರ್ ಅವರು ಮಕ್ಕಳ ಬೆಳವಣಿಗೆಯ ಹಂತಗಳು, ಬೆಳವಣಿಗೆಯ ವಿಳಂಬದ ಲಕ್ಷಣಗಳು ಹಾಗೂ ಆರಂಭಿಕ ಹಂತದಲ್ಲಿಯೇ ಗುರುತಿಸುವ ಮಹತ್ವದ ಕುರಿತು ಮಾಹಿತಿ ನೀಡಿದರು. ಮಾತನಾಡುವುದು, ನಡೆಯುವುದು, ಕಲಿಯುವುದು ಅಥವಾ ಇತರರೊಂದಿಗೆ ಬೆರೆಯುವಲ್ಲಿ ತೊಂದರೆ ಕಂಡುಬಂದರೆ ನಿರ್ಲಕ್ಷಿಸದೆ ಸೂಕ್ತ ತಜ್ಞರ ಸಲಹೆ ಮತ್ತು ಅಗತ್ಯ ಸೇವೆಗಳನ್ನು ಪಡೆಯುವಂತೆ ತಿಳಿಸಲಾಯಿತು.



23 July 2026ರಂದು ಕಲಬುರಗಿ ತಾಲೂಕಿನ ಹೊನ್ನಕಿರಣಗಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಸೇವಾ ಸಂಗಮ ಸಂಸ್ಥೆಯ ವತಿಯಿಂದ ತಾಯಂದಿರಿಗಾಗಿ ಮಕ್ಕಳ ಬೆಳವಣಿಗೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸಂಸ್ಥೆಯ ಕಾರ್ಯಕರ್ತರಾದ ಶ್ರೀ ರಾಜಕುಮಾರ್ ಅವರು ಅಪೌಷ್ಟಿಕತೆ, ಗರ್ಭಾವಸ್ಥೆಯಲ್ಲಿನ ತಾಯಿಯ ಆರೋಗ್ಯದ ನಿರ್ಲಕ್ಷ್ಯ, ಪೌಷ್ಟಿಕ ಆಹಾರದ ಕೊರತೆ ಹಾಗೂ ಸ್ವಚ್ಛತೆಯ ಅಭಾವವು ಮಕ್ಕಳ ಬೆಳವಣಿಗೆಯ ಮೇಲೆ ಪರಿಣಾಮ ಬೀರುವ ಕುರಿತು ಮಾಹಿತಿ ನೀಡಿದರು. ಮಗುವಿನ ಜೀವನದ ಮೊದಲ 1,000 ದಿನಗಳಲ್ಲಿ ಪೌಷ್ಟಿಕ ಆಹಾರ, ತಾಯಿಯ ಆರೈಕೆ, ಸ್ವಚ್ಛತೆ ಹಾಗೂ ನಿಯಮಿತ ಆರೋಗ್ಯ ತಪಾಸಣೆಯ ಮಹತ್ವವನ್ನು ವಿವರಿಸಲಾಯಿತು. ಮಕ್ಕಳ ಎತ್ತರ ಮತ್ತು ತೂಕವನ್ನು ನಿಯಮಿತವಾಗಿ ಪರಿಶೀಲಿಸುವ ಮೂಲಕ ಬೆಳವಣಿಗೆಯ ವಿಳಂಬವನ್ನು ಆರಂಭಿಕ ಹಂತದಲ್ಲೇ ಗುರುತಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬಹುದು ಎಂದು ತಿಳಿಸಲಾಯಿತು. ಮಕ್ಕಳ ಆರೋಗ್ಯ ಮತ್ತು ಸಮಗ್ರ ಬೆಳವಣಿಗೆಯಲ್ಲಿ ಪಾಲಕರ ಪಾತ್ರ ಮಹತ್ವದ್ದಾಗಿದೆ ಎಂದು ಅರಿವು ಮೂಡಿಸಲಾಯಿತು.



16 July 2026ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್ ಸಹಯೋಗದಲ್ಲಿ ಕಲಬುರಗಿ ನಗರದ ಚೇತನ ಚೈಲ್ಡ್ ಇಂಟರ್ವೆನ್ಶನ್ ಕೇಂದ್ರದಲ್ಲಿ ಬೆಳವಣಿಗೆಯಲ್ಲಿ ವಿಳಂಬ ಹೊಂದಿರುವ ಮಕ್ಕಳ ಪೋಷಕರಿಗಾಗಿ ಬಲವರ್ಧನೆಯ ಕಾರ್ಯಾಗಾರವನ್ನು ಆಯೋಜಿಸಲಾಯಿತು. ಕಾರ್ಯಾಗಾರದಲ್ಲಿ ಮನೆಯಲ್ಲಿ ಲಭ್ಯವಿರುವ ವಸ್ತುಗಳನ್ನು ಬಳಸಿ ಮಕ್ಕಳ ಬೆಳವಣಿಗೆಗೆ ಉತ್ತೇಜನ ನೀಡುವ ಚಟುವಟಿಕೆಗಳು ಹಾಗೂ ಮಕ್ಕಳ ಅಗತ್ಯಕ್ಕೆ ಅನುಗುಣವಾಗಿ ಸೂಕ್ತ ಚಟುವಟಿಕೆಗಳನ್ನು ನಡೆಸುವ ಕುರಿತು ಪ್ರಾಯೋಗಿಕ ತರಬೇತಿ ನೀಡಲಾಯಿತು. ಸಾಖ್ಯಾ ಫೌಂಡೇಶನ್‌ನ ಸಂಪನ್ಮೂಲ ವ್ಯಕ್ತಿ ಶ್ರೀ ಜನಿಫ್ ಅವರು ತರಬೇತಿ ನೀಡಿದರು. ಮಕ್ಕಳಿಗೆ ಅಗತ್ಯ ಕಾಳಜಿ, ಅನುಕೂಲಕರ ವಾತಾವರಣ ಹಾಗೂ ನಿಯಮಿತ ತರಬೇತಿಯ ಮಹತ್ವವನ್ನು ತಿಳಿಸಲಾಯಿತು.

## “ಪ್ರತಿಯೊಂದು ಸೇವೆಯಲ್ಲೂ ಮಾನವೀಯತೆ, ಪ್ರತಿಯೊಂದು ಹೆಜ್ಜೆಯಲ್ಲೂ ಬದಲಾವಣೆ”

# "ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ"



20 July 2026ರಂದು ಕಲಬುರಗಿ ನಗರದ ಆಶ್ರಯ ಕಾಲೋನಿಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗಾಗಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ 0 ರಿಂದ 7 ವರ್ಷದೊಳಗಿನ ಮಕ್ಕಳ ಪ್ರಮುಖ ಬೆಳವಣಿಗೆಯ ಹಂತಗಳು ಹಾಗೂ ಅವುಗಳಲ್ಲಿ ಕಂಡುಬರುವ ವಿಳಂಬವನ್ನು ಆರಂಭಿಕ ಹಂತದಲ್ಲೇ ಗುರುತಿಸುವ ಕುರಿತು ಮಾಹಿತಿ ನೀಡಲಾಯಿತು. ಮಗುವಿನ ಬೆಳವಣಿಗೆಯಲ್ಲಿ ವಯೋಸಹಜ ಹಂತಗಳು ತಡವಾದಲ್ಲಿ ನಿರ್ಲಕ್ಷಿಸದೆ, ಅಗತ್ಯ ಸಲಹೆ ಮತ್ತು ನೆರವು ಪಡೆಯುವ ಮಹತ್ವವನ್ನು ತಿಳಿಸಲಾಯಿತು.



13 July 2026ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್ ಸಹಯೋಗದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ ಕಲಬುರಗಿ ನಗರದ ಕೆ.ಎಚ್.ಬಿ. ಕಾಲೋನಿಯ ಶ್ರೀ ವೀರಸಂಗಪ್ಪ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಮಕ್ಕಳ ಬೆಳವಣಿಗೆಯ ವಿಳಂಬವನ್ನು ಗುರುತಿಸುವ ವಿಧಾನ, ಪ್ರಮುಖ ಲಕ್ಷಣಗಳು ಹಾಗೂ ಆರಂಭಿಕ ಹಸ್ತಕ್ಷೇಪದ ಮಹತ್ವದ ಕುರಿತು ಮಾಹಿತಿ ನೀಡಲಾಯಿತು. ಸಂಸ್ಥೆಯ ವತಿಯಿಂದ ಮಕ್ಕಳಿಗೆ ನೀಡಲಾಗುವ ವಿವಿಧ ಚಟುವಟಿಕೆಗಳು ಹಾಗೂ ವಿಶೇಷ ಅಗತ್ಯವಿರುವ ಮಕ್ಕಳಿಗೆ ದೊರೆಯುವ ಸರ್ಕಾರಿ ಸೌಲಭ್ಯಗಳ ಕುರಿತು ಅರಿವು ಮೂಡಿಸಲಾಯಿತು.



22 July 2026ರಂದು ಕಲಬುರಗಿ ನಗರದ ಎಂ.ಎಸ್.ಕೆ. ಮಿಲ್ ಪ್ರದೇಶದಲ್ಲಿ ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್ ಸಹಯೋಗದಲ್ಲಿ ಪೌಷ್ಟಿಕ ಆಹಾರದ ಮಹತ್ವದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ತರಕಾರಿಗಳು, ಹಣ್ಣುಗಳು, ಬೇಳೆ ಹಾಗೂ ಕಾಳುಗಳನ್ನು ನಿಯಮಿತವಾಗಿ ಸೇವಿಸುವುದರಿಂದ ದೇಹಕ್ಕೆ ಅಗತ್ಯವಾದ ಪೌಷ್ಟಿಕಾಂಶ ಮತ್ತು ಶಕ್ತಿ ದೊರೆಯುತ್ತದೆ ಎಂದು ತಿಳಿಸಲಾಯಿತು. ನೈಸರ್ಗಿಕವಾಗಿ ಬೆಳೆದ ಆಹಾರ ಪದಾರ್ಥಗಳನ್ನು ಸೇವಿಸುವುದು ಹಾಗೂ ಮನೆಯಲ್ಲಿಯೇ ಕೈತೋಟ ನಿರ್ಮಿಸಿ ಸಾವಯವ ವಿಧಾನದಲ್ಲಿ ತರಕಾರಿ ಮತ್ತು ಸೊಪ್ಪುಗಳನ್ನು ಬೆಳೆಸುವಂತೆ ಸಲಹೆ ನೀಡಲಾಯಿತು.

## ಸೇವೆ, ಸಬಲೀಕರಣ ಮತ್ತು ಸಾಮಾಜಿಕ ಪರಿವರ್ತನೆಯ ನಿರಂತರ ಪಯಣ"

## "ಜನರ ಬದುಕಿಗೆ ಹೊಸ ದಿಕ್ಕು, ಸಮಾಜಕ್ಕೆ ಹೊಸ ಭರವಸೆ"

# SEVA SANGAMA
## Social Media

Follow Us

sevasangama01

Seva Sangama

Seva Sangama Kalaburagi

Seva Sangama

orbithumnabad

We actively use social media platforms to create awareness, educate communities, and engage with the public on important social issues. Through informative posts, campaigns, live sessions, polls, and online discussions, we encourage community participation and meaningful conversations. Our content focuses on child rights, women's empowerment, mental health, youth development, digital safety, climate action, sustainable living, health, education, and other social development initiatives.

WWW.SEVASANGAMA.IN

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ

# ಧರ್ಮಕ್ಷೇತ್ರ ಗುಲ್ಬರ್ಗಾ

SEVA SANGAMA INCLUDING THE EXCLUDED

ORBIT ESTD... 1993

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ. ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

SCAN & DONATE

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

(Only for Indian Citizens)

**Bank Account Details**

DONATE

| | | |
|---|---|---|
| Name | : | Sevasangama Development Society |
| Account No | : | 16040100022902 |
| IFSC Code | : | FDRL0001604 |
| Bank | : | Federal Bank |
| Branch | : | Super Market Kalaburagi |


**Address**

Seva Sangama Development Society,
Near Kendriya Vidyalaya,
Kotnoor D, Kalaburagi, Karnataka-585102

**Contact**
8660968063
9743112739

**Email**
sevasangama2006@gmail.com

**Fr. Victor Anil Vas**
Director, Seva Sangama & ORBIT

Visit Us: www.sevasangama.in

# ORBIT NGO

Non-Governmental Organization
Humnaabad, Karnataka

Organization of Bidar Integral Transformation





*Together, we can*

# CREATE A BETTER TOMORROW

Your support helps us **empower lives**, **build communities** & bring hope.

## SCAN THIS QR CODE TO DONATE

- EMPOWER LIVES
- BUILD COMMUNITIES
- SUPPORT EDUCATION
- CREATE HOPE

*Your Small Act Can Make a Big Difference*

Visit Our Website
**www.orbitbidar.in**

## OUR MISSION

To bring positive and integral transformation in communities through education, empowerment, and sustainable development.


Humnaabad, Bidar District
Karnataka, India

Contact Us
8880843038


SEVA SANGAMA
SEVA SANGAMA
Organization for Social Concern Development
Scan this QR Code
TO DONATE
TOGETHER WE CAN
SUPPORT EDUCATION
EMPOWER COMMUNITIES
IMPROVE LIVELIHOODS
BUILD A BETTER SOCIETY
Your Support Creates a Better Tomorrow
Visit Our Website
www.sevasangama.in
“ Small Act. Big Impact.
Be the reason someone smiles today.
Together for Compassion
Together for Change
Together for a Better Future
Contact Us
8971119914
Follow Us